ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕರ್ನಾಟಕದ ನಾಲ್ಕು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳಲ್ಲಿ ಲೋಪ ಕಾಣಿಸಿಕೊಂಡಿದ್ದು, ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ತಿಳಿಸಿದರು.

13 ಮಾರ್ಚ್ 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 3 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಅಪ್ಪು ಬರ್ತ್‌ಡೇಗೆ ಬಾಕ್ಸಾಫೀಸ್ ಕದನ ; ಆಕಾಶ್ ಎದುರು ಅಖಾಡಕ್ಕಿಳಿದ ಡೆವಿಲ್ » 2



ಅವೈಜ್ಞಾನಿಕ ಕಾಮಗಾರಿಯಿಂದ ನಿವಾಸಿಗಳಿಗೆ ಸಂಕಷ್ಟ » 3



ಬಿಪಿಎಲ್ ಆದಾಯ ಮಿತಿ ಪರಿಷ್ಕರಿಸಿ » 4

# ಸಂಘರ್ಷ ನಿಲ್ಲಿಸಲು ಇರಾನ್ ಮೂರು ಷರತ್ತು

## ಪ್ರತೀಕಾರ ತೀರಿಸುತ್ತೇವೆ, ತಕ್ಕ ಪರಿಹಾರ ಪಡೆಯುತ್ತೇವೆ | ನೂತನ ಸರ್ವೋಚ್ಚ ನಾಯಕ ಮೊದಲ ಪ್ರತಿಕ್ರಿಯೆ

• ಪ್ರಜೋದಯ ವರದಿ

**ಟೆಹರಾನ್:** ಅಮೇರಿಕಾ ಮತ್ತು ಇಸ್ರೇಲ್ ಜೊತೆಗೆ ನಡೆಯುತ್ತಿರುವ ಸಂಘರ್ಷವನ್ನು ಕೊನೆಗೊಳಿಸಲು ಇರಾನ್ ಮೂರು ಷರತ್ತುಗಳನ್ನು ಹಾಕಿದೆ. ಯಾವುದೇ ನಿರ್ಣಯವು ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸಿ, ದೇಶವು ಭವಿಷ್ಯದ ದಾಳಿಯನ್ನು ಎದುರಿಸುವುದಿಲ್ಲವೆಂದು ಖಾತರಿಪಡಿಸಬೇಕೆಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರು ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪೆಜೆಶ್ಕಿಯಾನ್ ಯುದ್ಧದ ಸಮಯದಲ್ಲಿ ಉಂಟಾದ ಹಾನಿಗಳಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ. ರಷ್ಯಾ ಮತ್ತು ಪಾಕಿಸ್ತಾನದ ನಾಯಕರೊಂದಿಗೆ ಮಾತನಾಡುವ ವೇಳೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಈ ಪ್ರದೇಶದಲ್ಲಿ ಶಾಂತಿಗಾಗಿ ಇರಾನ್‌ನ ಬದ್ಧತೆಯನ್ನು ಪುನರುಚ್ಚರಿಸಿದ್ದೇನೆ. ಭವಿಷ್ಯದ ಆಕ್ರಮಣದ ವಿರುದ್ಧ ದೃಢವಾದ ಅಂತರಾಷ್ಟ್ರೀಯ ಖಾತ್ರಿಯನ್ನು ಒದಗಿಸಬೇಕೆಂದು ಅವರು ಬರೆದುಕೊಂಡಿದ್ದಾರೆ.

ಅಮೇರಿಕಾ ಒಂದು ವೇಳೆ ಇರಾನ್‌ನ ಬಂದರು ಮೇಲೆ ದಾಳಿ ಮಾಡಿದರೆ ಪರ್ಷಿಯನ್ ಕೊಲ್ಲಿಯಲ್ಲಿ ಯಾವುದೇ ಬಂದರು, ಆರ್ಥಿಕ ಕೇಂದ್ರ, ಅಥವಾ ಸ್ಥಳದ ಮೇಲೆ ಭಾರೀ ಪ್ರಮಾಣದಲ್ಲಿ ಕಾರ್ಯಾಚರಣೆ ನಡೆಸಲಾಗುವುದು ಎಂದು ಇರಾನ್‌ನ ಸಶಸ್ತ್ರ ಪಡೆಗಳ ವಕ್ತಾರ ಅಬೋಲ್‌ಫಜಲ್ ಶೆಕಾರ್ಚಿ, ಸರ್ಕಾರಿ ಸುದ್ದಿಸಂಸ್ಥೆ ಐಆರ್‌ಐಬಿಗೆ ಹೇಳಿಕೆ ನೀಡಿದ ನಂತರ ಪೆಜೆಶ್ಕಿಯಾನ್ ಈ ರೀತಿಯ ಹೇಳಿಕೆ ನೀಡಿದ್ದಾರೆ.

ನಮ್ಮ ಬಂದರುಗಳು ಮತ್ತು ಹಡಗುಕಟ್ಟೆಗಳಿಗೆ ದಾಳಿ ಮಾಡಿದರೆ, ಪರ್ಷಿಯನ್ ಕೊಲ್ಲಿಯ ಎಲ್ಲಾ ಬಂದರುಗಳು ಮತ್ತು ಹಡಗುಕಟ್ಟೆಗಳು ನಮ್ಮ ಕಾನೂನುಬದ್ಧ ಗುರಿಗಳಾಗುತ್ತವೆ. ಇಲ್ಲಿಯವರೆಗೆ ಮಾಡಿದ್ದಕ್ಕಿಂತ ಭಾರೀ ಪ್ರಮಾಣದಲ್ಲಿ ಕಾರ್ಯಾಚರಣೆಯನ್ನು ನಡೆಸುತ್ತವೆ. ಅಮೇರಿಕನ್ನರನ್ನು ತಮ್ಮ ಭೂಮಿಯಿಂದ ಹೊರಹಾಕಲು ನಾವು ಪ್ರದೇಶದ ದೇಶಗಳಿಗೆ ಕರೆ ನೀಡುತ್ತೇವೆಂದು ಶೆಕರ್ಚಿ ಎಚ್ಚರಿಕೆ ನೀಡಿದ್ದಾರೆ.

**ಇರಾನ್‌ನ ಬೇಡಿಕೆಗಳು**

- ಯುದ್ಧ ಹಾನಿಗೆ ಪರಿಹಾರ ನೀಡಬೇಕು
- ಭವಿಷ್ಯದ ಆಕ್ರಮಣದ ವಿರುದ್ಧ ದೃಢವಾದ ಖಾತ್ರಿ ನೀಡಿ
- ನಿರ್ಣಯವು ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸಲಿ



**ಜಲಸಂಧಿ ಮಾರ್ಗ ತೆರೆಯಲ್ಲ**

ಹಾರ್ಮುಜ್ ಜಲಸಂಧಿ ಮಾರ್ಗವನ್ನು ತೆರೆಯುವುದಿಲ್ಲ. ಮಧ್ಯ ಪ್ರಾಚ್ಯದ ನೆರೆಹೊರೆಯವರ ಮೇಲಿನ

» ನಾಲ್ಕನೇ ಪುಟದಲ್ಲಿ

**ಕಚ್ಚಾ ತೈಲ ಹೊತ್ತು ತಂದ ಹಡಗು**

ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾದ ಬಳಿಕ ಇದೇ ಮೊದಲ ಬಾರಿ ಕಚ್ಚಾ ತೈಲ ತುಂಬಿದ ಹಡಗು, ಹೊರ್ಮುಜ್ ಜಲಸಂಧಿಯಿಂದ ಭಾರತಕ್ಕೆ ತಲುಪಿದೆ. ತೈಲ ತುಂಬಿದ ಕಂಟೇನರ್‌ಗಳನ್ನು ಹೊಂದಿದ್ದ ಲೈಬೀರಿಯಾ ಮೂಲದ ಶೆನ್ಲಾಂಗ್ ಸೂಯೆಜ್‌ಮ್ಯಾಕ್ಸ್ ಎನ್ನುವ ಹಡಗು ಮುಂಬೈ ಬಂದರು ತಲುಪಿದೆ. ಅದರಲ್ಲಿ 1,35,335 ಟನ್ ಕಚ್ಚಾ ತೈಲವಿದೆ. ಇನ್ನೂ 36 ಗಂಟೆಗಳೊಳಗೆ ಅದನ್ನು ಮಹುಲ್, ಪೂರ್ವ ಮುಂಬೈನಲ್ಲಿರುವ ರಿಫೈನರಿಗಳಿಗೆ ಸಾಗಿಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ಬ್ಯಾಬ ಗ್ರಾಮದ ಸಂತ್ರಸ್ತರ ದುರಸ್ತು ಸಮಸ್ಯೆ ಪರಿಹರಿಸಿ

## ಸದನದಲ್ಲಿ ಸಿಮೆಂಟ್ ಮಂಜು ಒತ್ತಾಯ | ದಾಖಲೆ ಲಭ್ಯವಿಲ್ಲ, ಪರಿಶೀಲಿಸುತ್ತಿದ್ದೇವೆಂದ ಸರ್ಕಾರ

• ಪ್ರಜೋದಯ ವರದಿ

**ಹಾಸನ:** ಆಲೂರು ತಾಲ್ಲೂಕು ಬೈರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾಬ ಗ್ರಾಮದ ಸರ್ವೆ ನಂ.1 ರಲ್ಲಿ 50 ವರ್ಷಗಳಿಂದ ವಾಸವಿರುವ ಗೊರೂರು ಹೇಮಾವತಿ ಜಲಾಶಯದ ಮುಳುಗಡೆ ಸಂತ್ರಸ್ತರ ಭೂಮಿಗಳ ದುರಸ್ತು ಮಾಡಿಕೊಟ್ಟು, ಸಂತ್ರಸ್ತರಿಗೆ ಅನುಕೂಲ ಮಾಡಿಕೊಡಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಸದನದಲ್ಲಿ ಒತ್ತಾಯಿಸಿದರು.

ಹೇಮಾವತಿ ಅಣೆಕಟ್ಟೆ ನಿರ್ಮಾಣದ 1970-72ನೇ ಸಾಲಿನಲ್ಲಿ ಮುಳುಗಡೆ ಸಂತ್ರಸ್ತರನ್ನು ಬ್ಯಾಬ ಗ್ರಾಮಕ್ಕೆ ಸ್ಥಳಾಂತರಿಸಲಾಯಿತು. ಆದರೆ, 50 ವರ್ಷ ಕಳೆದರೂ ಅಲ್ಲಿರುವ ಜನರು ತಮ್ಮ ಆಸ್ತಿಯನ್ನು ದುರಸ್ತು ಮಾಡಿಸಿಕೊಳ್ಳಲಾಗದೆ, ಬೇರೆಯವರಿಗೆ ವರ್ಗಾಯಿಸಲೂ ಸಾಧ್ಯವಾಗದೆ ಪರದಾಡುವಂತಾಗಿದೆ ಎಂದು ಹೇಳಿದರು.

ತಮ್ಮ ಜಮೀನಿಗೆ ಬ್ಯಾಂಕ್‌ನಿಂದ ಸಾಲಸೌಲಭ್ಯ ಪಡೆದುಕೊಳ್ಳಲು ಆಗುತ್ತಿಲ್ಲ. 250 ರಿಂದ 300 ಕುಟುಂಬಗಳು ಈ ಸಮಸ್ಯೆಗೆ ಸಿಲುಕಿ ಕೊಂಡಿದ್ದಾರೆ. ಜಲಾಶಯ ನಿರ್ಮಾಣಕ್ಕಾಗಿ ಭೂಮಿ ಕಳೆದುಕೊಂಡರೂ ಇನ್ನೂ ಅವರನ್ನು ಅಲೆದಾಡಿಸುವ ಕೆಲಸವಾಗುತ್ತಿದೆ. ಇದ್ದ ಜಮೀನು ಕಳೆದುಕೊಂಡು, ಸಿಕ್ಕಿರುವ ಜಮೀನಿಗೆ ಅಗತ್ಯ ದಾಖಲೆಗಳು ಸಿಗದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಸರ್ಕಾರ ಮಧ್ಯ ಪ್ರವೇಶ ಮಾಡಿ ದುರಸ್ತು ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಉತ್ತರ ನೀಡಿದ ಸಚಿವ ಪ್ರಿಯಾಂಕ್ ಖರ್ಗೆ ಅವರು, ಹೇಮಾವತಿ ಭೂಸಂತ್ರಸ್ತರಿಗೆ ಬೈರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾಬ ಅರಣ್ಯ ಪ್ರದೇಶದಲ್ಲಿ ಭೂಮಿ ಕಾಯ್ದಿರಿಸಿ ಆದೇಶ ಹೊರಡಿಸಿರುವ ಬಗ್ಗೆ ಮೈಸೂರು ಅಥವಾ ಕರ್ನಾಟಕ ರಾಜ್ಯಪತ್ರ ಲಭ್ಯವಿಲ್ಲ. ಆದರೂ, ಶಾಸಕ ಆಸಕ್ತಿಯ ಮೇರೆಗೆ ಈಗಾಗಲೇ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಆದೇಶದ ಮೇರೆಗೆ ತಹಶೀಲ್ದಾರ್, ಉಪವಿಭಾಗಾಧಿಕಾರಿ ವರದಿ ಅನ್ವಯ ದಾಖಲೆಗಳನ್ನು ಪಡೆದು, ನೈಜ ಪರಿಸ್ಥಿತಿಯ ಅವಲೋಕನ, ದಾಖಲೆಗಳ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದೆ. ವರದಿ ಬಂದ ಬಳಿಕ ನೈಜ ಮಂಜೂರಿದಾರರಿಗೆ ನ್ಯಾಯ ಒದಗಿಸಲಾಗವುದೆಂದು ಭರವಸೆ ನೀಡಿದರು.

ಈ ವೇಳೆ ಮಧ್ಯ ಪ್ರವೇಶ ಮಾಡಿದ ಶಾಸಕ ಸಿಮೆಂಟ್ ಮಂಜು, ಅರಣ್ಯ ಇಲಾಖೆ ಈಗಾಗಲೇ ವರದಿ ನೀಡಿದ್ದು, ಶೀಘ್ರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.





# ಸಂಧಾನ ನೆಪದಲ್ಲಿ ಮೂವರ ಮೇಲೆ ಮಾರಣಾಂತಿಕ ಹಲ್ಲೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜಮೀನು ವಿಚಾರವಾಗಿ ಉಂಟಾಗಿದ್ದ ಸಮಸ್ಯೆಯನ್ನು ಸಂಧಾನದ ಮೂಲಕ ಬಗೆಹರಿಸುವುದಾಗಿ ಮನೆಗೆ ಕರೆಸಿಕೊಂಡ ಮಾಜಿ ಸೈನಿಕರೊಬ್ಬರು ಮೂವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ವೆಂಕಟೇಶ್ ಎಂಬಾತ ತನ್ನ ಅತ್ತೆ ಮಗ ಶೇಖರ್ ಹಾಗು ಅವರ ಪತ್ನಿ ಪ್ರೇಮಕುಮಾರಿ, ಪುತ್ರ ವೆಂಕಟೇಶ್ ಮೇಲೆ ಮಚ್ಚಿನಿಂದ ಮನಬಂದಂತೆ ಹಲ್ಲೆ ನಡೆಸಿದ್ದಾನೆ. ಸೈನಿಕರಾಗಿದ್ದ ವೆಂಕಟೇಶ್ ಸೇವೆಯಿಂದ ನಿವೃತ್ತನಾಗಿ ಕೃಷಿ ಕೆಲಸ ಮಾಡಿಕೊಂಡಿದ್ದ ಎನ್ನಲಾಗಿದೆ. ಜಮೀನು ವಿಚಾರವಾಗಿ ಅತ್ತೆ ಮಗ ಶೇಖರ್ ಜೊತೆ ಮನಸ್ತಾಪವಿತ್ತು. ಇತ್ತೀಚೆಗೆ ಎರಡೂ ಕಡೆಯವರು ಸುಮ್ಮನಿದ್ದು, ತಮ್ಮ ಪಾಡಿಗೆ ತಾವು ಕೆಲಸ ಮಾಡಿಕೊಂಡಿದ್ದರು. ಆದರೆ, ಗುರುವಾರ ಬೆಳಿಗ್ಗೆ ಮಾಜಿ ಸೈನಿಕ ವೆಂಕಟೇಶ್, ಶೇಖರ್‌ನನ್ನು ಮನೆಗೆ ಕರೆಸಿಕೊಂಡಿದ್ದ ಎಂದು ತಿಳಿದುಬಂದಿದೆ.

ರಾಜಿ ಸಂಧಾನದ ವೇಳೆ ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಹತ್ತಿರದಲ್ಲೇ ಇದ್ದ ಮಚ್ಚಿನಿಂದ ಶೇಖರ್ ತಲೆಗೆ ಬೀಸಿದ್ದಾನೆ. ಜಗಳ ಬಿಡಿಸಲು ಬಂದ ಶೇಖರ್ ಪತ್ನಿ ಪ್ರೇಮಕುಮಾರಿ, ಪುತ್ರ ವೆಂಕಟೇಶ್‌ನ ಕುತ್ತಿಗೆಗೂ ಇರಿದಿದ್ದಾನೆ. ಕೆಲವೇ ಕ್ಷಣಗಳಲ್ಲಿ ಮನೆ ಪೂರ್ತಿ ರಕ್ತದ ಮಡುವಿನಲ್ಲಿ ಮುಳುಗಿದ್ದು, ಗಂಭೀರ ಗಾಯಗೊಂಡಿದ್ದ ಮೂವರು ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದರೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಅಕ್ಕಪಕ್ಕದ ಮನೆಯವರು ಪೊಲೀಸರಿಗೆ ಮಾಹಿತಿ ನೀಡಿ, ಆ್ಯಂಬುಲೆನ್ಸ್ ಮೂಲಕ ಮೂವರನ್ನು ಹಿಮ್ಸ್‌ಗೆ ದಾಖಲಿಸಲಾಯಿತು. ಮಾಜಿ ಸೈನಿಕ ವೆಂಕಟೇಶ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆತನ ಪತ್ನಿ ರಾಣಿ ಹಾಗು ಸಂಬಂಧಿ ರತ್ನ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಮನೆ ಸುತ್ತಲಿನ ಸಿಸಿಟಿವಿ ಕ್ಯಾಮರಾ ದೃಶ್ಯಾವಳಿ ಆಧರಿಸಿ ತನಿಖೆ ಮುಂದುವರಿಸಿದ್ದಾರೆ.





# ಸರ್ಫೇಸಿ ಕಾಯ್ದೆ: ಬ್ಯಾಂಕ್ ಮುಖ್ಯಸ್ಥರ ತುರ್ತು ಸಭೆಗೆ ಆದೇಶ

• ಪ್ರಜೋದಯ ವರದಿ

**ಹಾಸನ:** ಕಾಫಿ ತೋಟಗಳ ಮೇಲೆ ಮಾಡಿದ್ದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಲಾಗದೆ ಸರ್ಫೇಸಿ ಕಾಯ್ದೆ ಪರಿಣಾಮ ತೋಟದ ಮಾಲೀಕತ್ವವನ್ನೇ ಕಳೆದುಕೊಳ್ಳಬೇಕಿದೆ. ಈ ಗಂಭೀರ ಸಮಸ್ಯೆಯನ್ನು ಬೆಳೆಗಾರರ ಒಕ್ಕೂಟ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದರಿಂದ ಬ್ಯಾಂಕಿಂಗ್ ಮುಖ್ಯಸ್ಥರ ತುರ್ತು ಸಭೆ ಕರೆಯಲು ಆದೇಶಿಸಲಾಗಿದೆ.

ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಹಳಸೆ ಶಿವಣ್ಣ, ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ. ದಿನೇಶ್ ಅವರ ನೇತೃತ್ವದ ನಿಯೋಗ ರಾಜ್ಯದ ಸಂಸದರಾದ ಡಾ.ಸಿ.ಎನ್.ಮಂಜುನಾಥ್, ಕೋಟಾ ಶ್ರೀನಿವಾಸ ಪೂಜಾರಿ, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಜೊತೆ ನವದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಕೈಗಾರಿಕೆ ಹಾಗು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಕಾಫಿ ಬೆಳೆಗಾರರ ಸಮಸ್ಯೆಯನ್ನು ಮನವರಿಕೆ ಮಾಡಿಕೊಡಲಾಗಿದೆ.

ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಸರ್ಫೇಸಿ ಕಾಯ್ದೆಯ ಅಡಿಯಲ್ಲಿ ಆನ್-ಲೈನ್ ಹರಾಜು ಪ್ರಕ್ರಿಯೆ ತಡೆ ಹಿಡಿಯುವಂತೆ ಈ ಹಿಂದೆ ಕೇಂದ್ರ ಸಚಿವರು ಸೂಚಿಸಿದ್ದರೂ ಕೂಡ ಬ್ಯಾಂಕ್‌ಗಳು ಸಚಿವರ ಸೂಚನೆಯನ್ನು ಧಿಕ್ಕರಿಸಿ ಕಾಫಿ ಬೆಳೆಗಾರರಿಗೆ ಇ-ಆಕ್ಷನ್ ನೋಟೀಸ್‌ಗಳನ್ನು ಜಾರಿ ಮಾಡುತ್ತಿರುವ ಕುರಿತು ಗಮನ ಸೆಳೆಯಲಾಯಿತು.

- ಬೆಳೆಗಾರರ ಒಕ್ಕೂಟ, ಕಾಫಿ ಮಂಡಳಿಯಿಂದ ಕೇಂದ್ರ ಸಚಿವರ ಭೇಟಿ
- ವಿತ್ತ ಸಚಿವರೊಂದಿಗೆ ರಾಜ್ಯದ ಮೂವರು ಸಂಸದರ ಚರ್ಚೆ

ಕೃಷಿ ಸಾಲದ ವ್ಯಾಪ್ತಿಯಲ್ಲಿ ಪಡೆದ ಕಾಫಿ ಸಂಬಂಧಿತ ಸಾಲಗಳನ್ನು ವಾಣಿಜ್ಯ ಸಾಲಗಳ ವಸೂಲಾತಿ ಮಾದರಿಯಲ್ಲಿ ಸರ್ಫೇಸಿ ಕಾಯ್ದೆ ಬಳಸಿ ಬೆಳೆಗಾರರ ತೋಟಗಳನ್ನು ಹರಾಜು ಹಾಕುತ್ತಿರುವ ಬ್ಯಾಂಕ್‌ಗಳ ನಿಲುವುಗಳ ಕುರಿತು ಉದಾಹರಣೆಗಳ ಸಮೇತ ವಿವರಿಸಲಾಯಿತು. ಬೆಳೆಗಾರರ ತೋಟಗಳನ್ನು ಹರಾಜು ಮಾಡುವ ಸಂದರ್ಭದಲ್ಲಿ ಬ್ಯಾಂಕ್‌ಗಳು ಉದ್ದೇಶ ಪೂರ್ವಕವಾಗಿ ತೋಟಗಳ ಮಾರುಕಟ್ಟೆ ಮೌಲ್ಯವನ್ನು ಕಡೆಗಣಿಸಿ ತಮ್ಮ ಸಾಲದ ಬಾಬ್ತು ಬಾಕಿ ಇರುವ ಮೊತ್ತವನ್ನು ಮಾತ್ರ ಪರಿಗಣಿಸಿ ಹರಾಜು ಮಾಡಿ ಬೆಳೆಗಾರರಿಗೆ ತೀವ್ರ ನಷ್ಟ ಉಂಟು ಮಾಡುತ್ತಿರುವ ಬಗ್ಗೆ ಗಮನ ಸೆಳೆಯಲಾಯಿತು.

ಈಗಾಗಲೇ ಅಸ್ತಿತ್ವದಲ್ಲಿರುವ ಡಿಆರ್‌ಟಿ ಮೂಲಕ ಸುಸ್ಥಿ ಸಾಲಗಳ ಕುರಿತಾದ ವಸೂಲಾತಿ ಪ್ರಕ್ರಿಯೆ ಅಡಿಯಲ್ಲಿ ಹೆಚ್ಚು ಪಾರದರ್ಶಕ ಹಾಗು ನ್ಯಾಯ ಸಮ್ಮತ ತೀರ್ಮಾನ ತೆಗೆದುಕೊಳ್ಳಬಹುದೆಂದು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವರಿಕೆ ಮಾಡಿಕೊಡಲಾಯಿತು. ಸುದೀರ್ಘ ಚರ್ಚೆಯ ನಂತರ ಕೇಂದ್ರ ಹಣಕಾಸು ಸಚಿವರು ಕೂಡಲೇ ಬ್ಯಾಂಕಿಂಗ್ ಮುಖ್ಯಸ್ಥರನ್ನು ಒಳಗೊಂಡಂತೆ ತುರ್ತು ಸಭೆ ಕರೆಯಲು ಆದೇಶ ನೀಡಿದ್ದಾರೆ. ಹೀಗಾಗಿ ಕಾಫಿ ಬೆಳೆಗಾರರಿಗೆ ಸರ್ಫೇಸಿ ಕಾಯ್ದೆಯ ಆತಂಕ ತಪ್ಪುವ ನಿರೀಕ್ಷೆ ಹೆಚ್ಚಿದೆ.



> ರಾಜ್ಯದ ಸಂಸದರೊಂದಿಗೆ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಸರ್ಫೇಸಿ ಕಾಯ್ದೆ ಆತಂಕದ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ನಮ್ಮ ಮನವಿಗೆ ಸ್ಪಂದಿಸಿದ ವಿತ್ತ ಸಚಿವೆ, ಕೂಡಲೇ ಬ್ಯಾಂಕಿಂಗ್ ಮುಖ್ಯಸ್ಥರನ್ನು ಒಳಗೊಂಡಂತೆ ತುರ್ತು ಸಭೆ ಕರೆಯಲು ಆದೇಶ ಮಾಡಿದ್ದಾರೆ.
> **- ಹಳಸೆ ಶಿವಣ್ಣ, ಅಧ್ಯಕ್ಷ ಕರ್ನಾಟಕ ಬೆಳೆಗಾರರ ಒಕ್ಕೂಟ**

**ಆನ್‌ಲೈನ್ ಹರಾಜಿಗೆ ಬ್ರೇಕ್ ಸಾಧ್ಯತೆ**

ಸರ್ಫೇಸಿ ಕಾಯ್ದೆಯಡಿ ಕಾಫಿಯೂ ಬರುತ್ತಿದ್ದರಿಂದ ಕಾಫಿ ಬೆಳೆಗಾರರು ಮಾಡಿದ ಸಾಲ ಮರುಪಾವತಿ ಮಾಡಲು ಸಾಧ್ಯವಾಗದಿದ್ದರೆ ಅವರು ಬ್ಯಾಂಕ್‌ಗೆ ಅಡಮಾನ ಮಾಡಿದ ಕಾಫಿ ತೋಟವನ್ನು ಆನ್‌ಲೈನ್ ಮೂಲಕವೇ ಹರಾಜು ಮಾಡಲಾಗುತ್ತಿತ್ತು. ಇದರಿಂದ ನೂರಾರು ಕಾಫಿ ಬೆಳೆಗಾರರು ತೋಟದ ಮಾಲೀಕತ್ವ ಕಳೆದುಕೊಂಡಿದ್ದರು. ಈ ಬಗ್ಗೆ ಬೆಳೆಗಾರರು ಕೆಲ ವರ್ಷದಿಂದ ಹೋರಾಟ ನಡೆಸುತ್ತಿದ್ದರೂ ಸಮಸ್ಯೆಗೆ ಪರಿಹಾರ ಸಿಕ್ಕಿರಲಿಲ್ಲ. ಇದೀಗ ಕೇಂದ್ರ ಸರ್ಕಾರ ಕದತಟ್ಟಿ, ಸಚಿವರನ್ನು ನೇರವಾಗಿ ಭೇಟಿ ಮಾಡಿ ಸಮಸ್ಯೆಯ ತೀವ್ರ ಸ್ವರೂಪವನ್ನು ತಿಳಿಸಿಕೊಟ್ಟಿರುವುದರಿಂದ ಆನ್‌ಲೈನ್ ಹರಾಜು ಪ್ರಕ್ರಿಯೆಗೆ ಬ್ರೇಕ್ ಬೀಳುವ ಸಾಧ್ಯತೆ ಇದೆ.

**ಕೇಂದ್ರ ಸಚಿವರ ಸೂಚನೆ ಧಿಕ್ಕರಿಸಿದ್ದ ಬ್ಯಾಂಕ್**

ಈ ಹಿಂದೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ನೇತೃತ್ವದಲ್ಲಿ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಸೇರಿ ಕೆಲ ಸಂಸದರು ವಿತ್ತ ಸಚಿವೆ ನಿರ್ಮಲಾ ಸೀತಾ ರಾಮನ್ ಅವರನ್ನು ಭೇಟಿ ಮಾಡಿ ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟದ ಮಾಹಿತಿ ನೀಡಲಾಗಿತ್ತು. ಆ ಸಂದರ್ಭದಲ್ಲಿ ನಿರ್ಮಲಾ ಸೀತಾರಾಮನ್ ಆರ್‌ಬಿಐ ಸೇರಿ ಸಂಬಂಧಿಸಿದ ಅಧಿಕಾರಿಗಳಿಗೆ ಕಾಫಿ ತೋಟ ಗಳನ್ನು ಆನ್‌ಲೈನ್ ಮೂಲಕ ಹರಾಜು ಹಾಕಲು ಅವಕಾಶ ನೀಡಬಾರದೆಂದು ಸೂಚನೆ ನೀಡಿದ್ದಾರೆ. ಸಚಿವರ ಸೂಚನೆ ಯನ್ನೂ ಧಿಕ್ಕರಿಸಿ ಕಾಫಿ ಬೆಳೆಗಾರರಿಗೆ ನೋಟೀಸ್ ನೀಡಲಾಗುತ್ತಿತ್ತು. ಹೀಗಾಗಿ ಸಚಿವರು ತುರ್ತು ಸಭೆ ಕರೆದಿದ್ದಾರೆ.

**ನಿರಂತರ ನೋಟೀಸ್‌ನಿಂದ ಆತಂಕ**

ಆರ್ಥಿಕ ವರ್ಷದ ಕೊನೆಯ ತಿಂಗಳಾಗಿರುವುದರಿಂದ ಮಾರ್ಚ್ ತಿಂಗಳಲ್ಲಿ ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಯ ಸಾಲ ಪಡೆದ ನೂರಾರು ಕಾಫಿ ಬೆಳೆಗಾರರಿಗೆ ನಿರಂತರವಾಗಿ ಬ್ಯಾಂಕ್‌ಗಳಿಂದ ನೋಟೀಸ್ ಬರುತ್ತಿದ್ದವು. ತೋಟ ಹರಾಜು ಮಾಡುವ ಸಂಬಂಧ ಟೆಂಡರ್ ನೋಟಿಫಿಕೇಷನ್ ಸಹ ನೀಡಲಾಗುತ್ತಿತ್ತು. ಹೀಗಾಗಿ ಒಕ್ಕೂಟ ನೇರವಾಗಿ ವಿತ್ತ ಸಚಿವರನ್ನು ಭೇಟಿ ಮಾಡಿ, ಬೆಳೆಗಾರರ ನೆರವಿಗೆ ಬರುವಂತೆ ಕೋರಿದ್ದಾರೆ.

# ಅಕ್ರಮ ಮದ್ಯ ಮಾರಾಟ ತಡೆಗೆ ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟಕ್ಕೆ ತಡೆ ನೀಡುವಂತೆ ಆಗ್ರಹಿಸಿ ತಾಲ್ಲೂಕಿನ ಹೂವಿನ ಮಾರನಹಳ್ಳಿ ಗ್ರಾಮದ ಮಹಿಳೆಯರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಮಹಿಳೆಯರು, ಗ್ರಾಮದ ಕೆಲ ಅಂಗಡಿಗಳು, ಮನೆಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಯುವಕರು ಸೇರಿ ಹಲವರು ಮಂದಿ ಮದ್ಯ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಸುಲಭವಾಗಿ ಮದ್ಯ ಸಿಗುತ್ತಿರುವುದರಿಂದ ಮದ್ಯ ಸೇವನೆ ಮಾಡಿದ ಬಳಿಕ ಕೆಲವರು ಆಕ್ರೋಶದಿಂದ ವರ್ತಿಸಿ ಆಗಾಗ ಗಲಾಟೆ ಮಾಡುತ್ತಿದ್ದು, ಕುಟುಂಬಗಳಲ್ಲಿ ಶಾಂತಿ ಇಲ್ಲದಂತಾಗಿ ಮನೆಯಲ್ಲಿ ನೆಮ್ಮದಿ ಇಲ್ಲದಂತಾಗಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದರು.



ದಿನನಿತ್ಯ ಕೆಲಸ ಕಡೆಗಣಿಸಿ ಮದ್ಯ ಸೇವನೆಗೆ ಒಳಗಾಗುತ್ತಿರುವುದು ಕುಟುಂಬಗಳ ಆರ್ಥಿಕ ಸ್ಥಿತಿಯ ಮೇಲೆ ಹೊಡೆತ ನೀಡುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಅಂಗಡಿ, ಮನೆಗಳಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟ ನಿಲ್ಲಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು.

ಗ್ರಾಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮ ಕೈಗೊಂಡು ಮದ್ಯ ಮಾರಾಟ ನಿಲ್ಲಿಸಿ ಗ್ರಾಮಸ್ಥರಿಗೆ ಸುರಕ್ಷಿತ ಹಾಗೂ ಶಾಂತ ವಾತಾವರಣ ಒದಗಿಸಬೇಕೆಂದು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಗ್ರಾಮಸ್ಥರಾದ ಶೈಲಾ, ಸೌಮ್ಯ, ಜ್ಯೋತಿ, ಶಶಿಕಲಾ, ರಾಜಮ್ಮ, ನೇತ್ರಾವತಿ, ಸುಮಿತ್ರ, ಭಾಗ್ಯ, ಸಾಕಮ್ಮ, ರತ್ನಮ್ಮ ಹಾಜರಿದ್ದರು.

# ಒಳಮೀಸಲಾತಿ ವರದಿ: ಪರಿಶೀಲನೆಗೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಸಿದ್ಧಪಡಿಸಿರುವ ಒಳಮೀಸಲಾತಿ ವರದಿ ಅವೈಜ್ಞಾನಿಕವಾಗಿದ್ದು, ಲೋಪ ಸರಿಪಡಿಸಬೇಕೆಂದು ಆಗ್ರಹಿಸಿ ಛಲವಾದಿ ಮಹಾ ಸಭಾದಿಂದ ಗುರುವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸ ಲಾಯಿತು.

ರಾಜ್ಯದ ಪರಿಶಿಷ್ಟ 101 ಜಾತಿಗಳ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆದರೆ, ಅದರಿಂದ ಆದಿದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ, ಪಂಗಡಗಳಿಗೆ ಸೇರಿದ ಬಲಗೈನ 19 ಸಮುದಾಯಗಳಿಗೆ ಸಾಮಾಜಿಕ, ಶೈಕ್ಷಣಿಕ ಹಾಗು ಔದ್ಯೋಗಿಕವಾಗಿ ಅನ್ಯಾಯವಾಗುತ್ತದೆ. ಈ ನಡುವೆ ಕರ್ನಾಟಕ ಸರ್ಕಾರ ಮೀಸಲಾತಿ ಪ್ರಮಾಣವನ್ನು ಶೇ. 56ಕ್ಕೆ ಹೆಚ್ಚಿಸಿರುವುದು ತಪ್ಪು ನಡೆಯಾಗಿದೆ. ಮೀಸಲಾತಿ ಪ್ರಮಾಣ ಶೇ. 50 ಮೀರಬಾರದೆಂದು ಸಂವಿಧಾನದಲ್ಲಿ ಉಲ್ಲೇಖವಾಗಿದ್ದರೂ ಅದನ್ನು ಏರಿಕೆ ಮಾಡಿರುವುದು ಹಲವು ಸಂಶಯ ಹುಟ್ಟು ಹಾಕಿದೆ ಎಂದರು.

ಒಳ ಮೀಸಲಾತಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕುವ ಮೊದಲು ಪರಿಶಿಷ್ಟ ಜಾತಿ ಪ್ರವರ್ಗ ಎ, ಪ್ರವರ್ಗ ಬಿ ಮತ್ತು ಪ್ರವರ್ಗ ಸಿ ಅಡಿಯಲ್ಲಿ ಮೀಸಲಾತಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರವರ್ಗ ಎ (ಮಾದಿಗ) ಅವಕಾಶ ಸೃಷ್ಟಿಸಿರುವುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಒಳಮೀಸಲಾತಿ ಕಾನೂನು ಜಾರಿಯಾಗುವವರೆಗೆ ಸರ್ಕಾರದ ಯಾವುದೇ ಇಲಾಖೆ, ಸಂಸ್ಥೆ ಹಾಗು ಶೈಕ್ಷಣಿಕ ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ ಪ್ರಕ್ರಿಯೆಗೆ ತಡೆ ನೀಡಬೇಕೆಂದು ಆಗ್ರಹಿಸಿದರು.

ಮುಂದಿನ ಶೈಕ್ಷಣಿಕ ವರ್ಷಕ್ಕೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಒಳಮೀಸಲಾತಿ ಅನ್ವಯ ಜಾತಿ ಪ್ರಮಾಣ ಪತ್ರ ಪಡೆಯುವಂತೆ ಅಧಿಕಾರಿಗಳು ಒತ್ತಡ ಹೇರುತ್ತಿದ್ದು, ಆ ಪ್ರಕ್ರಿಯೆಗೆ ತಡೆಯೊಡ್ಡಬೇಕು. ಒಳ ಮೀಸಲಾತಿಯ ಎಲ್ಲಾ ಗೊಂದಲಗಳು ಪರಿಹಾರ ಕಾಣುವವರೆಗೆ ಕಂದಾಯ ಇಲಾಖೆಯಲ್ಲಿ ಆರ್‌ಡಿ ನಂಬರ್‌ನೊಂದಿಗೆ ನೀಡಿರುವ ಜಾತಿ ಪ್ರಮಾಣ ಪತ್ರವನ್ನೇ ಪರಿಗಣಿಸಬೇಕೆಂದು ಕೋರಿದರು.



# ರೈಲ್ವೆ ಕಾಮಗಾರಿ : ರೈಲುಗಳ ಸಂಚಾರದಲ್ಲಿ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ತುಮಕೂರು ಬಳಿ ರೈಲ್ವೆ ಕಾಮಗಾರಿ ಹಿನ್ನಲೆ ಇಂಟರ್ ಸಿಟಿ ಎಕ್ಸ್‌ಪ್ರೆಸ್ ಸೇರಿ 25 ರೈಲುಗಳ ಸಂಚಾರ ವ್ಯತ್ಯಯವಾಗಲಿದೆ. ಏಪ್ರಿಲ್ 2ನೇ ಹಾಗು 3ನೇ ವಾರ ಹಲವು ರೈಲುಗಳು ರದ್ದಾಗಲಿವೆ, ಕೆಲ ರೈಲುಗಳ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಏ.8, 11, 12 ಮತ್ತು 15 ರಂದು ರೈಲು ಸಂಖ್ಯೆ 20652 ತಾಳಗುಪ್ಪ ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಅರಸೀಕೆರೆ ಮತ್ತು ಬೆಂಗಳೂರು ನಡುವೆ ರದ್ದಾಗಲಿದೆ. ಈ ರೈಲು ಅರಸೀಕೆರೆಯಲ್ಲಿ ತನ್ನ ಪ್ರಯಾಣ ಮುಕ್ತಾಯಗೊಳಿಸಲಿದೆ.

ಏ.8, 11, 12 ಮತ್ತು 15 ರಂದು ರೈಲು ಸಂಖ್ಯೆ 12725 ಕೆಎಸ್‌ಆರ್ ಬೆಂಗಳೂರು- ಧಾರವಾಡ ಸಿದ್ದಗಂಗಾ ಎಕ್ಸ್‌ಪ್ರೆಸ್ ಬೆಂಗಳೂರು ಮತ್ತು ಅರಸೀಕೆರೆ ನಡುವೆ ರದ್ದಾಗಲಿದೆ. ಇದು ಬೆಂಗಳೂರಿನ ಬದಲಿಗೆ ಅರಸೀಕೆರೆಯಿಂದ ತನ್ನ ನಿಗದಿತ ಸಮಯಕ್ಕೆ ಹೊರಡಲಿದೆ.

ಏ.8 ಮತ್ತು 15 ರಂದು ರೈಲು ಸಂಖ್ಯೆ 12726 ಧಾರ ವಾಡ-ಕೆಎಸ್‌ಆರ್ ಬೆಂಗಳೂರು ಸಿದ್ದಗಂಗಾ ಎಕ್ಸ್ ಪ್ರೆಸ್ ಅರಸೀಕೆರೆ ಮತ್ತು ಬೆಂಗಳೂರು ನಡುವೆ ರದ್ದಾಗ ಲಿದ್ದು, ಅರಸೀಕೆರೆಯಲ್ಲಿ ಪ್ರಯಾಣ ಮುಕ್ತಾಯ ಗೊಳಿಸಲಿದೆ.

**ಮಾರ್ಗ ಬದಲಾವಣೆ**

ಏ.7 ಮತ್ತು 14 ರಂದು ವಾಸ್ಕೋಡ ಗಾಮ ನಿಲ್ದಾಣ ದಿಂದ ಹೊರಡುವ ರೈಲು ಸಂಖ್ಯೆ 17310 ವಾಸ್ಕೋಡ ಗಾಮ-ಯಶವಂತಪುರ ಎಕ್ಸ್‌ಪ್ರೆಸ್ ರೈಲು ಅರಸೀಕೆರೆ, ಹಾಸನ, ನೆಲಮಂಗಲ, ಯಶವಂತಪುರ ಮಾರ್ಗವಾಗಿ ಸಂಚರಿಸಲಿದೆ, ಹೀಗಾಗಿ ಈ ರೈಲು ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ತಪ್ಪಲಿದೆ.

ಏ.7 ಮತ್ತು 14 ರಂದು ವೇಲಂಕಣ್ಣಿಯಿಂದ ಹೊರ ಡುವ ರೈಲು ಸಂಖ್ಯೆ 17316 ವೇಲಂಕಣ್ಣಿ-ವಾಸ್ಕೋಡಗಾಮ ವೀಕ್ಲಿ ಎಕ್ಸ್‌ಪ್ರೆಸ್ ಚಿಕ್ಕಬಾಣಾವರ, ನೆಲಮಂಗಲ, ಹಾಸನ, ಅರಸೀಕೆರೆ ಮಾರ್ಗವಾಗಿ ಸಂಚರಿಸಲಿದೆ, ಹೀಗಾಗಿ ಈ ರೈಲು ತುಮಕೂರು ಮತ್ತು ತಿಪಟೂರು ನಿಲ್ದಾಣಗಳಲ್ಲಿ ನಿಲುಗಡೆ ತಪ್ಪಲಿದೆ.

ಏ.8 ಮತ್ತು 15 ರಂದು ಹೊರಡುವ ರೈಲು ಸಂಖ್ಯೆ 20689 ಯಶವಂತಪುರ - ಶಿವಮೊಗ್ಗಟೌನ್ ಡೈಲಿ ಎಕ್ಸ್‌ಪ್ರೆಸ್ ಚಿಕ್ಕಬಾಣಾವರ, ನೆಲಮಂಗಲ, ಹಾಸನ, ಅರಸೀಕೆರೆ ಮಾರ್ಗದ ಮೂಲಕ ಸಂಚರಿಸಲಿದೆ. ಹೀಗಾಗಿ ತುಮಕೂರು ಮತ್ತು ತಿಪಟೂರಿನಲ್ಲಿ ನಿಲುಗಡೆ ಇರುವುದಿಲ್ಲ. ಏ.8 ಮತ್ತು 15 ರಂದು ಪ್ರಾರಂಭವಾಗುವ ರೈಲು ಸಂಖ್ಯೆ 20676 ಮೈಸೂರು-ಬೆಳಗಾವಿ ವಿಶ್ವಮಾನವ್ ಡೈಲಿ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ಮೈಸೂರು, ಹೊಳೆನರಸೀಪುರ, ಹಾಸನ, ಅರಸೀಕೆರೆ ಮೂಲಕ ಚಲಿಸಲಿದೆ, ಪಾಂಡವಪುರದಿಂದ ತಿಪಟೂರಿನವರೆಗೆ ನಿಲುಗಡೆ ಇರುವುದಿಲ್ಲ.

# ಅಕ್ರಮವಾಗಿ ಸಂಗ್ರಹಿಸಿದ್ದ 3 ಟಿಪ್ಪರ್ ಮರಳು ವಶ



• ಪ್ರಜೋದಯ ವರದಿ

**ಸಕಲೇಶಪುರ:** ಅಕ್ರಮವಾಗಿ ಸಂಗ್ರಹಣೆ ಮಾಡಲಾಗಿದ್ದ ಮರಳು ಅಡ್ಡೆ ಮೇಲೆ ಗುರುವಾರ ದಾಳಿ ನಡೆಸಿದ ಕಂದಾಯ ಇಲಾಖೆ ಅಧಿಕಾರಿಗಳು ತಾಲ್ಲೂಕಿನ ಮಳಲಿ ಗ್ರಾಮ ಸಮೀಪ ಮೂರು ಟಿಪ್ಪರ್ ಮರಳು ವಶಪಡಿಸಿಕೊಂಡಿದ್ದಾರೆ.

ತಾಲ್ಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಮರಳು ದಂಧೆ ಕುರಿತು ಪ್ರಜೋದಯ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಗೆ ಎಚ್ಚೆತ್ತು ಅಧಿಕಾರಿಗಳು ದಾಳಿ

» ನಾಲ್ಕನೇ ಪುಟದಲ್ಲಿ

# ಜಾವಗಲ್ ಹೋಬಳಿಯಲ್ಲಿ ವಿದ್ಯುತ್ ಅಭಾವ: ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಬೇಸಿಗೆ ಆರಂಭಕ್ಕೂ ಮೊದಲೇ ಲೋಡ್ ಶೆಡ್ಡಿಂಗ್ ಸಮಸ್ಯೆ ಆರಂಭವಾಗಿದ್ದು, ಬೆಳೆಗಳು ಒಣಗಿ ಹೋಗುತ್ತಿವೆ ಎಂದು ಆರೋಪಿಸಿ ಗುರುವಾರ ಅರಸೀಕೆರೆ ತಾಲ್ಲೂಕು ಜಾವಗಲ್ ಸೆಸ್ಕಾಂ ಶಾಖಾಧಿಕಾರಿ ಕಚೇರಿಗೆ ಬೀಗ ಹಾಕಿ ಸುತ್ತಲಿನ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ದಿನಕ್ಕೆ 7 ಗಂಟೆ ವಿದ್ಯುತ್ ನೀಡಬೇಕೆಂದು ಸರ್ಕಾರದ ಆದೇಶವಿದ್ದರೂ ಕೇವಲ ಒಂದರಿಂದ ಎರಡು ಗಂಟೆ ಮಾತ್ರ ನೀಡಲಾಗುತ್ತಿದೆ. ಕರೆ ಮಾಡಿದರೆ ಅಧಿಕಾರಿಗಳು ಸ್ಪಂದಿಸುವುದಿಲ್ಲ. ನೀರಿಲ್ಲದೆ ಬೆಳೆಗಳು ಸಂಪೂರ್ಣ ಒಣಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿ, ಶುಂಠಿ, ತೆಂಗಿನ ತೋಟ, ತರಕಾರಿ, ದಾಳಿಂಬೆ ಸೇರಿ ಮತ್ತಿತರ ಬೆಳೆಗಳು ಹಾಳಾಗುತ್ತಿವೆ. ದಶಕಗಳ ಹಿಂದೆ ನೀರಿಲ್ಲದೆ ನಿರೀಕ್ಷಿತ ಬೆಳೆ ಪಡೆಯಲು ಆಗುತ್ತಿರಲಿಲ್ಲ. ಆದರೀಗ ನೀರಿದ್ದರೂ ವಿದ್ಯುತ್ ಇಲ್ಲವಾಗಿದೆ. ಸಾಲ ಸೋಲ ಮಾಡಿ ಬೆಳೆ ಮಾಡಿರುವ ರೈತರು ಸೆಸ್ಕಾಂ ಕಣ್ಣಾಮುಚ್ಚಾಲೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆಯೆಂದು ರೈತರೊಬ್ಬರು ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಳ್ಳಲೆತ್ನಿಸಿದರು.



ಜಾವಗಲ್ ಹೋಬಳಿಯ ಮಾರಗೊಂಡನಹಳ್ಳಿ, ತಾವರೆಹಳ್ಳಿ, ಚಿಕ್ಕಜಿಕಟ್ಟೆಹಳ್ಳಿ, ಜಾವಗಲ್, ಅರಕೆರೆ ಸೇರಿ ಸುತ್ತಲಿನ ಹಳ್ಳಿಗಳಲ್ಲಿ ಸಮಸ್ಯೆಯಾಗುತ್ತಿದೆ. ಕಳೆದ ಒಂದು ತಿಂಗಳ ಇದೇ ಪರಿಸ್ಥಿತಿ ಇದೆ. ಹೀಗಾದರೆ ಅನ್ನದಾತರು ಬದುಕುವುದು ಹೇಗೆಂದು ಪ್ರಶ್ನಿಸಿದರು.

ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದೆ. ಜಾನುವಾರುಗಳು ಪರಿತಪಿಸುತ್ತಿವೆ. ಪರೀಕ್ಷಾ ಸಮಯವಾಗಿರುವುದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೂ ತೊಂದರೆಯಾಗುತ್ತಿದೆ. ಸಮಸ್ಯೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲವೆಂದು ದೂರಿದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸೆಸ್ಕಾಂ ಎಇ ಜಯಪ್ಪ ಅವರು ಮಾತನಾಡಿ, ವಿದ್ಯುತ್ ಓವರ್‌ಲೋಡ್‌ನಿಂದ ಸಮಸ್ಯೆಯಾಗುತ್ತಿದೆ. ಕೋಳಗುಂದ ಗೇಟ್‌ನಲ್ಲಿ ಮತ್ತೊಂದು ಸಬ್ ಸ್ಟೇಷನ್ ಆಗಬೇಕು. ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಅದು ಸೇವೆಗೆ ಸಿದ್ಧವಾದರೆ ಸಮಸ್ಯೆಯಾಗುವುದಿಲ್ಲ. ಈ ವರ್ಷ ಬೇಸಿಗೆಯಲ್ಲಿ ವಿದ್ಯುತ್ ಅಭಾವ ಎದುರಾಗುವುದು ಸಹಜ. ತಾತ್ಕಾಲಿಕ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು. ನಿತ್ಯ 4 ಗಂಟೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಮುಂಜಾಗ್ರತೆ ವಹಿಸುತ್ತೇನೆಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ವಾಪಾಸ್ ಪಡೆಯಲಾಯಿತು

CMYK CMYK CMYK CMYK

E-mail : prajodayahsn@gmail.com
ಪ್ರಜೋದಯ
13 ಮಾರ್ಚ್ 2026 ಶುಕ್ರವಾರ

# ಸಿನಿ ಪ್ರಜಾ

## ಶಿವಣ್ಣ-ಡಾಲಿಯ ಆಪರೇಷನ್ ಡ್ರೀಮ್ ಥಿಯೇಟರ್ 666 ನಲ್ಲಿ ಏಜೆಂಟ್ ಕಾವೇರಿ; ನಟಿ ಅದಿತಿ ಬಾಲನ್

ಈ ವರ್ಷದ ಸ್ಯಾಂಡಲ್‌ವುಡ್‌ನ ಮತ್ತೊಂದು ಮೋಸ್ಟ್ ಎಕ್ಸ್‌ಪೆಕ್ಟೆಡ್ ಸಿನಿಮಾ ಆಪರೇಷನ್ ಡ್ರೀಮ್ ಥಿಯೇಟರ್ 666. ಗೋಧಿ ಬಣ್ಣ ಸಾಧಾರಾಣ ಮೈಕಟ್ಟು, ಕವಲುದಾರಿ, ಸಪ್ತ ಸಾಗರದಾಚೆ ಎಲ್ಲೋ ಅಂತಹ ಸಿನಿಮಾಗಳನ್ನು ನಿರ್ದೇಶಿಸಿರುವ ಹೇಮಂತ್ ರಾವ್ ಈ ಸಿನಿಮಾ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಹೀಗಾಗಿ ಆಪರೇಷನ್ ಡ್ರೀಮ್ ಥಿಯೇಟರ್ 666 ಮೇಲೆ ನಿರೀಕ್ಷೆ ಹೆಚ್ಚಾಗಿದೆ.

ಸೆಂಚುರಿಸ್ಟಾರ್ ಶಿವರಾಜ್‌ಕುಮಾರ್, ಡಾಲಿ ಧನಂಜಯ್ ಸೇರಿದಂತೆ ದೊಡ್ಡ ತಾರಾಳಗವೇ ಈ ಸಿನಿಮಾದಲ್ಲಿದೆ. ಈಗ ಆಪರೇಷನ್ ಡ್ರೀಮ್ ಥಿಯೇಟರ್ 666 ಸಿನಿಮಾ ತಂಡಕ್ಕೆ ಮತ್ತೊಮ್ಮ ಪ್ರತಿಭಾನ್ವಿತ ನಟಿಯ ಸೇರ್ಪಡೆಯಾಗಿದೆ. ತಮ್ಮ ಬೊಕ್ಕಸದಿಂದ ಮತ್ತೊಂದು ಪ್ರಮುಖ ಪಾತ್ರವನ್ನು ಚಿತ್ರತಂಡ ರಿವೀಲ್ ಮಾಡಿದೆ. ತಮಿಳು ಚಿತ್ರರಂಘದ ಖ್ಯಾತ ನಟಿ, ತಮಿಳಿನ ರಾಜ್ಯ ಪ್ರಶಸ್ತಿ ವಿಜೇತೆ ಅದಿತಿ ಬಾಲನ್ ಈ ಸಿನಿಮಾಗೆ ಗ್ರ್ಯಾಂಡ್ ಎಂಟ್ರಿ ಕೊಟ್ಟಿದ್ದಾರೆ.

ಆಪರೇಷನ್ ಡ್ರೀಮ್ ಥಿಯೇಟರ್ 666 ನಲ್ಲಿ ಅದಿತಿ ಬಾಲನ್ ಅವರು ಏಜೆಂಟ್ ಕಾವೇರಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಅದಿತಿ ಬಾಲನ್ ತಮಿಳುನಾಡಿನ ಜನಪ್ರಿಯ ನಟಿ. ಅರುವಿ ಎಂಬ ತಮ್ಮ ಮೊದಲ ಚಿತ್ರದಲ್ಲಿ ಉತ್ತಮ ಅಭಿನಯದಿಂದ ಎಲ್ಲರ ಮನೆ ಮಾತಾಗಿದ್ದರು. ತದನಂತರ ಕ್ಯಾಪ್ಟನ್ ಮಿಲ್ಲರ್, ಪಡವೆಟ್ಟು ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಇದೀಗ ಆಪರೇಷನ್ ಡ್ರೀಮ್ ಥಿಯೇಟರ್ 666 ನಲ್ಲಿ ಏಜೆಂಟ್ ಕಾವೇರಿಯಾಗಿ ಕಾಣಿಸಿಕೊಳ್ಳಲಿದ್ದಾರೆ.




ನಿರ್ದೇಶಕ ಹೇಮಂತ್ ರಾವ್ ತಮ್ಮ ಸಿನಿಮಾದಲ್ಲಿ ಅದಿತಿ ಬಾಲನ್ ಅವರ ಪಾತ್ರದ ಫಸ್ಟ್ ಲುಕ್ ಅನ್ನು ರಿವೀಲ್ ಮಾಡಿದ್ದಾರೆ. ಆಪರೇಷನ್ ಡ್ರೀಮ್ ಥಿಯೇಟರ್ 666 ನಲ್ಲಿ ಈಗಾಗಲೇ ಶಿವಣ್ಣ ಹಾಗೂ ಡಾಲಿ ಧನಂಜಯ್ ಪಾತ್ರಗಳು ಕಿಕ್ ಕೊಟ್ಟಿವೆ. ರೆಟ್ರೋ ಲುಕ್‌ನಲ್ಲಿ ಇವರು ಸಖತ್ ಆಗಿ ಕಾಣಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ತಮ್ಮ ಅಭಿಮಾನಿಗಳಲ್ಲಿ ಕುತೂಹಲ ಕೆರಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆಪರೇಷನ್ ಡ್ರೀಮ್ ಥಿಯೇಟರ್ 666 ನಲ್ಲಿ ಕರುನಾಡ ಚಕ್ರವರ್ತಿ ಡಾ ಶಿವರಾಜಕುಮಾರ್ ಏಜೆಂಟ್ ಪ್ರಕಾಶ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಲುಕ್ ಸೆಂಚರಿ ಸ್ಟಾರ್ ಅಭಿಮಾನಿಗಳ ಹೃದಯ ಗೆದ್ದಿತ್ತು. ಶಿವಣ್ಣ ಈ ಪಾತ್ರವು ಆಪರೇಷನ್ ಡೈಮಂಡ್ ರಾಕೆಟ್ ಸಿನಿಮಾದಲ್ಲಿನ ಡಾ. ರಾಜಕುಮಾರ್ ಅವರ ಪಾತ್ರಕ್ಕೆ ಗೌರವ ಸಲ್ಲಿಸಲಿದೆ. ನಂತರ ಚಿತ್ರತಂಡ ನಟರಾಕ್ಷಸ ಡಾಲಿ ಧನಂಜಯ್ ಅವರನ್ನು ಏಜೆಂಟ್ ಶಂಕರ್ ಆಗಿ ಪರಿಚಯಿಸಿದೆ. ಇದೀಗ ನಟಿ ಅದಿತಿ ಬಾಲನ್ ಅವರನ್ನು ಏಜೆಂಟ್ ಕಾವೇರಿಯಾಗಿ ಪರಿಚಯಿಸಿ ಪ್ರೇಕ್ಷಕರ ಕುತೂಹಲ ದುಪ್ಪಟ್ಟು ಮಾಡಿದೆ.

ಈ ಸಿನಿಮಾ ಈಗಾಗಲೇ ಐದನೇ ಹಂತ ಶೂಟಿಂಗ್ ಅನ್ನು ಮುಗಿಸಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತಕ್ಕೆ ಕಾಲಿಡುತ್ತಿದೆ. ಹೇಮಂತ್ ರಾವ್ ನಿರ್ದೇಶನದ ಆಪರೇಷನ್ ಡ್ರೀಮ್ ಥಿಯೇಟರ್ 666 ಸಿನಿಮಾದಲ್ಲಿ ಕರುನಾಡ ಚಕ್ರವರ್ತಿ ಡಾ. ಶಿವರಾಜ್ ಕುಮಾರ್, ನಟ ರಾಕ್ಷಸ ಡಾಲಿ ಧನಂಜಯ್, ಪ್ರಿಯಾಂಕಾ ಮೋಹನ್, ಅದಿತಿ ಬಾಲನ್ ಮುಂತಾದವರು ನಟಿಸಿದ್ದು, ಈ ಚಿತ್ರವನ್ನು ಡಾ. ವೈಶಾಖ್ ಜೆ ಗೌಡ ನಿರ್ಮಾಣ ಮಾಡುತ್ತಿದ್ದಾರೆ.ಆಪರೇಷನ್ ಡ್ರೀಮ್ ಥಿಯೇಟರ್ 666 ಸಿನಿಮಾಗೆ ಕನ್ನಡದ ಟಾಪ್ ಸಂಗೀತ ನಿರ್ದೇಶಕ ಚರಣ್ ರಾಜ್ ಟ್ಯೂನ್ ಹಾಕುತ್ತಿದ್ದಾರೆ. ಅದ್ವೈತ ಗುರುಮೂರ್ತಿ ಛಾಯಾಗ್ರಹ ರಾಗಿ ಕೆಲಸ ಮಾಡಿದ್ದಾರೆ. ವಿಶ್ವಾಸ್ ಕಶ್ಯಪ್ ಪ್ರೊಡಕ್ಷನ್ ಡಿಸೈನ್ ಮಾಡಿದ್ದು, ಇಂಚರ ಸುರೇಶ್ ಕಾಸ್ಟ್ಯೂಮ್ ಡಿಸೈನ್ ಮಾಡಿದ್ದಾರೆ. ಆಪರೇಷನ್ ಡ್ರೀಮ್ ಥಿಯೇಟರ್ 666 ಒಂದು ಆಕ್ಷನ್, ಡ್ರಾಮಾ ಕಮ್ ಥ್ರಿಲ್ಲರ್ ಸಿನಿಮಾ ಆಗಿತ್ತು. ಇದೊಂದು ವಿನೂತನ ಪ್ರಯತ್ನ ಆಗಿದ್ದು, ಏಜೆಂಟ್‌ಗಳನ್ನು ಮುಖ್ಯ ಪಾತ್ರಗಳಲ್ಲಿ ತೋರಿಸಲಾ ಗಿದೆ. ಇದೊಂದು ವಿಭಿನ್ನವಾದ ಥ್ರಿಲ್ ಅನುಭವವನ್ನು ಪ್ರೇಕ್ಷಕರಿಗೆ ನೀಡಲಿದೆ. ಈ ಸಿನಿಮಾವನ್ನು ಕನ್ನಡ ಹಾಗೂ ತೆಲುಗಿನಲ್ಲಿ ಬಿಡುಗಡೆ ಮಾಡುವುದಕ್ಕೆ ಚಿತ್ರ ತಂಡ ಪ್ರಯತ್ನ ನಡೆಸುತ್ತಿದೆ. ಈಗಾಗಲೇ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಈ ವರ್ಷವೇ ಬಿಡುಗಡೆಯಾಗಲಿದೆ.

## ಅಪ್ಪು ಬರ್ತ್‌ಡೇಗೆ ಬಾಕ್ಸಾಫೀಸ್ ಕದನ; ಆಕಾಶ್ ಎದುರು ಅಖಾಡಕ್ಕಿಳಿದ ಡೆವಿಲ್

ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಬರ್ತ್‌ಡೇ ಸನಿಹದಲ್ಲಿದೆ. ಇದೇ ಮಾರ್ಚ್ 17ರಂದು ಅಪ್ಪು 51ನೇ ಹುಟ್ಟುಹಬ್ಬವನ್ನು ಅಭಿಮಾನಿಗಳು ಅದ್ಧೂರಿಯಾಗಿ ಆಚರಿಸುವುದಕ್ಕೆ ಮುಂದಾಗಿದ್ದಾರೆ. ಪುನೀತ್ ಅಗಲಿದ ಬಳಿಕ ಅವರ ಪ್ರತಿ ಹುಟ್ಟುಹಬ್ಬಕ್ಕೂ ಅವರು ನಟಿಸಿದ ಒಂದು ಸೂಪರ್ ಹಿಟ್ ಸಿನಿಮಾವನ್ನು ಅಶ್ವಿನಿ ಪುನೀತ್ ರಾಜ್ ಕುಮಾರ್ ರಿಲೀಸ್ ಮಾಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ಬಾರಿ ಕೂಡ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬಕ್ಕೆ ಸೂಪರ್ ಹಿಟ್ ಸಿನಿಮಾ ಆಕಾಶ್ ರಿಲೀಸ್ ಆಗುತ್ತಿದೆ. ಪಿಆರ್‌ಕೆ ಪ್ರೊಡಕ್ಷನ್‌ನಿಂದ ಈಗಾಗಲೇ ಆಕಾಶ್ ಸಿನಿಮಾದ ಟ್ರೈಲರ್ ಕೂಡ ರಿಲೀಸ್ ಮಾಡಲಾಗಿದೆ. ಈ ಸಿನಿಮಾದಲ್ಲಿ ನಟಿಸಿದ್ದ ಕಲಾವಿದರು ಕೂಡ ತಮ್ಮ ನೆನಪುಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಸ್ವಾರಸ್ಯಕರ ಸಂಗತಿಗಳನ್ನು ಬಿಚ್ಚಿಡುತ್ತಿದ್ದಾರೆ.

ಮಹೇಶ್ ಬಾಬು ನಿರ್ದೇಶಿಸಿದ್ದ ಈ ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್ ಜೊತೆ ನಾಯಕಿಯಾಗಿ ಮೋಹಕತಾರೆ ರಮ್ಯಾ ನಟಿಸಿದ್ದಾರೆ. ಹಾಡುಗಳು ಇಂದಿಗೂ ಸಿನಿಪ್ರಿಯರ ಬಾಯಲ್ಲಿ ಕೇಳುವುದಕ್ಕೆ ಸಿಗುತ್ತಿದೆ. ಹೀಗಾಗಿ ಆಕಾಶ್ ಸಿನಿಮಾವನ್ನು ಮತ್ತೆ ತೆರೆಮೇಲೆ ನೋಡುವುದಕ್ಕೆ ಅಪ್ಪು ಫ್ಯಾನ್ಸ್ ತುದಿಗಾಲಲ್ಲಿ ನಿಂತಿದ್ದಾರೆ. ಈ ಮಧ್ಯೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಸಿನಿಮಾ ಡೆವಿಲ್ ಕೂಡ ಆಕಾಶ್ ಎದುರು ರಿಲೀಸ್ ಆಗುತ್ತಿದೆ. ಅಷ್ಟಕ್ಕೂ ಕೊನೆಯ ಕ್ಷಣದ ಈ ನಿರ್ಧಾರದ ಹಿಂದಿನ ಲೆಕ್ಕಾಚಾರವೇನು? ಆಕಾಶ್ ಎದುರು ಡೆವಿಲ್ ಬಿಡುಗಡೆಯಾಗುತ್ತಿರುವ ಹಿನ್ನೆಲೆಯೇನು? ತಿಳಿಯುವುದಕ್ಕೆ ಮುಂದೆ ಓದಿ.




**ಬರ್ತ್‌ಡೇಗೆ ಆಕಾಶ್:** ಕಳೆದ ವರ್ಷ ಪುನೀತ್ ರಾಜ್‌ಕುಮಾರ್ ಬರ್ತ್‌ಡೆ ಜಾಕಿ ಸಿನಿಮಾವನ್ನು ರಿ-ರಿಲೀಸ್ ಮಾಡಲಾಗಿತ್ತು. ಅಂದೇ ಅಪ್ಪು ಅಭಿಮಾನಿಗಳು ಮುಂದಿನ ವರ್ಷ (ಅಂದರೆ, ಈ ವರ್ಷ) ಆಕಾಶ್ ಸಿನಿಮಾವನ್ನು ರಿಲೀಸ್ ಆಗಬೇಕು ಎಂದು ಬೇಡಿಕೆ ಇಟ್ಟಿದ್ದರು. ಅವರ ಬೇಡಿಕೆಯ ಮೇರೆಗೆ ಪಿಆರ್‌ಕೆ ಪ್ರೊಡಕ್ಷನ್ ಅಂದರೆ, ಅಶ್ವಿನಿ ಪುನೀತ್ ರಾಜ್‌ಕುಮಾರ್ ಆಕಾಶ್ ಸಿನಿಮಾವನ್ನು ಬಿಡುಗಡೆ ಮಾಡುತ್ತಿದ್ದಾರೆ.

**ಆಕಾಶ್ ಎದುರು ಡೆವಿಲ್**

ಪುನೀತ್ ರಾಜ್ ಕುಮಾರ್ ಸಿನಿಮಾ ಆಕಾಶ್ ರಿಲೀಸ್ ಆಗುತ್ತಿರೋದೇನೋ ಸರಿ. ಆದರೆ, ಈ ಸಿನಿಮಾದ ಎದುರು ಡೆವಿಲ್ ಸಿನಿಮಾವನ್ನು ಬಿಡುಗಡೆ ಮಾಡಲಾಗುತ್ತಿದೆ. ಕಳೆದ ಬಾರಿ ಕೂಡ ಜಾಕಿ ಎದುರು ದರ್ಶನ್ ನಟಿಸಿದ ಕರಿಯ ಸಿನಿಮಾವನ್ನು ಬಿಡುಗಡೆ ಮಾಡಲಾಗಿತ್ತು. ಇದು ಇಬ್ಬರು ಅಭಿಮಾನಿಗಳ ನಡುವಿನ ವೈಮನಸ್ಸಿಗೆ ಎಡೆ ಮಾಡಿಕೊಟ್ಟಿತ್ತು. ಈ ವರ್ಷ ಕೂಡ ಆಕಾಶ್ ಎದುರು ಡೆವಿಲ್ ರಿಲೀಸ್ ಆಗುತ್ತಿದೆ. ಬೆಂಗಳೂರಿನ ಪ್ರಸನ್ನ ಚಿತ್ರಮಂದಿರದಲ್ಲಿ ಬಿಡುಗಡೆ ಯಾಗುತ್ತಿದೆ. ಹೀಗಾಗಿ ಈ ಬಾರಿ ಕೂಡ ಅಭಿಮಾನಿಗಳ ನಡುವೆ ವೈಮನಸ್ಸು ಮೂಡುವ ಸಾಧ್ಯತೆಯಿದೆ.

**ಎಷ್ಟೆಷ್ಟು ಥಿಯೇಟರ್‌ಗಳಲ್ಲಿ ರಿಲೀಸ್?**

ಪುನೀತ್ ರಾಜ್‌ಕುಮಾರ್ ಬತ್‌ರ್ಡೇ ಹಿನ್ನೆಲೆಯಲ್ಲಿ ಆಕಾಶ್ ಸಿನಿಮಾ ಕರ್ನಾಟಕದಾದ್ಯಂತ ಸುಮಾರು 80 ರಿಂದ 100 ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗಲಿದೆ. ಅದೇ ಇನ್ನೊಂದು ಕಡೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಸಿನಿಮಾ ಡೆವಿಲ್ ಕೇವಲ ಆಯ್ದ ಚಿತ್ರಮಂದಿರಗಳಲ್ಲಿ ರಿಲೀಸ್ ಆಗಬಹುದು. ಅದರಲ್ಲೂ ಬೆಂಗಳೂರಿನ ಪ್ರಸನ್ನ ಪ್ರಮುಖ ಚಿತ್ರಮಂದಿರವಾಗಿ ಬಿಡುಗಡೆ ಯಾಗುತ್ತಿದೆ.

**ಡೆವಿಲ್ ರಿ-ರಿಲೀಸ್ ಯಾಕೆ?**

ಚಾಲೆಂಜಿಂಗ್ ಸ್ಟಾರ್ ದರ್ಶನ್ ಆರೋಪಿಯಾಗಿ ಜೈಲಿನಲ್ಲಿದ್ದಾರೆ. ಇಂತಹ ಸಂಕಷ್ಟದ ಸಮಯದಲ್ಲಿ ರಿಲೀಸ್ ಆಗಿದ್ದು ಡೆವಿಲ್. ಕಳೆದ ವರ್ಷ ತೆರೆಕಂಡಾಗ ಸಿನಿಮಾ ನಿರೀಕ್ಷೆ ಮಾಡಿದಷ್ಟು ಬಾಕ್ಸಾಫೀಸ್‌ನಲ್ಲಿ ಸದ್ದು ಮಾಡ್ಲಿಲ್ಲ. ಹೀಗಾಗಿ ಮರು ಬಿಡುಗಡೆ ಮಾಡಲಾಗುತ್ತಿದೆ ಎನ್ನಲಾಗಿದೆ. ಇನ್ನೊಂದು ಇನ್‌ಸೈಡ್ ಸ್ಟೋರಿ ಏನಂದ್ರೆ, ಪ್ರಸನ್ನ ಚಿತ್ರಮಂದಿರದ ಮಾಲೀಕರು ದರ್ಶನ್‌ಗೆ ತೀರಾ ಹತ್ತಿರ. ಈ ಕಾರಣಕ್ಕಾಗಿ ಡೆವಿಲ್ ರಿಲೀಸ್ ಮಾಡುತ್ತಿದ್ದಾರೆಂಬ ಮಾತು ಇದೆ. ಕಳೆದ ಬಾರಿ ಕೂಡ ಜಾಕಿ ಎದುರು ಕರಿಯ ಸಿನಿಮಾವನ್ನು ರಿಲೀಸ್ ಮಾಡಿದ್ದರು.




## ಮತ್ತೆ ಸೆಟ್ಟೇರುತ್ತಿದೆ ಮುಳ್ಳಿನ ಗುಲಾಬಿ

ಅನಂತ ನಾಗ್, ಆರತಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದ ಮುಳ್ಳಿನ ಗುಲಾಬಿ 1982ರಲ್ಲಿ ತೆರೆಕಂಡಿತ್ತು. 44 ವರ್ಷಗಳ ನಂತರ ಅದೇ ಶೀರ್ಷಿಕೆಯ ಚಿತ್ರ ಸೆಟ್ಟೇರಲು ಸಿದ್ಧವಾಗಿದೆ. ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ಚಿತ್ರಕ್ಕೆ ಸ್ಮೈಲ್ ಶಿವು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಹೆಣ್ಣೊಬ್ಬಳು ಚಿಕ್ಕ ವಯಸಿನಲ್ಲೇ ಮದುವೆಯಾಗಿ ಗಂಡನ ಮನೆಗೆ ಹೋದಾಗ ಏನೆಲ್ಲ ಆಗುತ್ತದೆ ಎಂಬುದೇ ಕಥೆ. ಆ ಮನೆಯಲ್ಲಿ ಅತ್ತೆ, ಮಾವನ ಕಡೆಯಿಂದ ಏನೆಲ್ಲ ಕಿರುಕುಳ, ಕಷ್ಟಗಳನ್ನು ಅನುಭವಿಸುತ್ತಾಳೆ, ಕೊನೆಗೆ ಅದನ್ನೆಲ್ಲ ಎದುರಿಸಿ ಹೇಗೆ ಸಮಾಜದಲ್ಲಿ ಬೆಳೆದು ನಿಲ್ಲುತ್ತಾಳೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲಾಗುತ್ತಿದೆ. ಆಶಾ ಗುರುಲಿಂಗಯ್ಯ ಅವರ ಕಾದಂಬರಿಯನ್ನಾಧರಿಸಿದ ಚಿತ್ರವಿದು ಎಂದರು ನಿರ್ದೇಶಕ.

ಭೂಮಿಕಾ ಸಿನಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಬಿ.ಕೆ.ಶಿವಕುಮಾರ್ ಬಂಡವಾಳ ಹೂಡುತ್ತಿದ್ದಾರೆ. ಆಶಾ ಗುರುಲಿಂಗಯ್ಯ ಪ್ರಮುಖ ಪಾತ್ರದಲ್ಲಿದ್ದಾರೆ. ರವಿ ಸುವರ್ಣ ಛಾಯಾಚಿತ್ರಗ್ರಹಣ, ವಿನು ಮನಸು ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.




## ಭಾರತೀಯ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆಯಲು ಸಜ್ಜಾದ ನಾಗಬಂಧಂ: ಸಾವಿರ ನೃತ್ಯ ಕಲಾವಿದರ ಜೊತೆ ನಮೋ ರೇ ಹಂಗಾಮಾ

ಭಾರತೀಯ ಚಿತ್ರರಂಗದಲ್ಲಿ ಸದ್ಯ ಭಾರೀ ಕುತೂಹಲ ಕೆರಳಿಸಿರುವ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ ನಾಗಬಂಧಂ ನಿರ್ಮಾಣದ ಹಂತದಲ್ಲಿಯೇ ದೊಡ್ಡ ಮಟ್ಟದ ಸಂಚಲನ ಸೃಷ್ಟಿಸುತ್ತಿದೆ. ಖ್ಯಾತ ನಿರ್ದೇಶಕ ಅಭಿಷೇಕ್ ನಾಮಾ ಅವರ ಸಾರಥ್ಯದಲ್ಲಿ ಮೂಡಿಬರುತ್ತಿರುವ ಈ ಚಿತ್ರವನ್ನ ಎನ್.ಐ.ಕೆ ಸ್ಟುಡಿಯೋಸ್ ಲಾಂಛನದಡಿಯಲ್ಲಿ ಕಿಶೋರ್ ಅನ್ನಪೂರೆಡ್ಡಿ ಮತ್ತು ನಿಶಿತಾ ನಾಗಿರೆಡ್ಡಿ ನಿರ್ಮಿಸುತ್ತಿದ್ದಾರೆ. ಭಾರತೀಯ ಸಿನಿಮಾದ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುವ ಗುರಿ ಹೊಂದಿರುವ ಈ ಸಿನಿಮಾ, ತನ್ನ ವಿಶಿಷ್ಟ ಕಥಾಹಂದರ ಹಾಗೂ ತಾಂತ್ರಿಕ ಶ್ರೀಮಂತಿಕೆಯಿಂದ ಎಲ್ಲ ವರ್ಗದ ಪ್ರೇಕ್ಷಕರನ್ನ ಸೆಳೆಯಲು ಸಜ್ಜಾಗಿದೆ.

ನಾಗಬಂಧಂ ಸಿನಿಮಾದ ಮಹತ್ವದ ಮೈಲಿಗಲ್ಲಾಗಿ, ಚಿತ್ರದ ಮೊದಲ ಸಿಂಗಲ್ ಹಾಡು ನಮೋ ರೇ ಇದೇ ಮಾರ್ಚ್ 15 ರಂದು ಬೆಳಗ್ಗೆ 11:11 ಗಂಟೆಗೆ ಅಧಿಕೃತವಾಗಿ ರಿಲೀಸ್ ಆಗಲಿದೆ. ಭಗವಾನ್ ಶ್ರೀಮನ್ನಾರಾಯಣನಿಗೆ ಭಕ್ತಿಯ ಸಮರ್ಪಣೆಯಾಗಿ ಮೂಡಿಬಂದಿರುವ ಈ ಗೀತೆಯು ಚಿತ್ರದ ಆಳವಾದ ಆಧ್ಯಾತ್ಮಿಕ ಸತ್ವವನ್ನು ಪ್ರತಿಬಿಂಬಿಸುತ್ತದೆ. ಆಧ್ಯಾತ್ಮಿಕ ಹಿನ್ನೆಲೆಯುಳ್ಳ ಈ ಹಾಡು ಪ್ರೇಕ್ಷಕರಲ್ಲಿ ದೈವಿಕ ಭಾವನೆಯನ್ನ ಮೂಡಿಸುವಲ್ಲಿ ಯಶಸ್ವಿಯಾಗಲಿದೆ ಎಂದೇ ಹೇಳಬಹುದು.

ಸಾವಿರ ನೃತ್ಯ ಕಲಾವಿದರು

ನಮೋ ರೇ ಗೀತೆಯ ಅತಿದೊಡ್ಡ ಹೈಲೈಟ್ ಎಂದರೆ, ಇದರಲ್ಲಿ ಸುಮಾರು ಒಂದು ಸಾವಿರ ನೃತ್ಯ ಕಲಾವಿದರು ಭಾಗವಹಿಸಿರುವುದು. ಭಾರತದ ವಿವಿಧ ನೃತ್ಯ ಪ್ರಕಾರಗಳ ವೈವಿಧ್ಯತೆ ಮತ್ತು ಏಕತೆಯನ್ನ ಸಾರುವ ಸಲುವಾಗಿ ಈ ಬೃಹತ್ ನೃತ್ಯ ಸಂಯೋಜನೆಯನ್ನ ಮಾಡಲಾಗಿದೆ. ಖ್ಯಾತ ನೃತ್ಯ ಸಂಯೋಜಕರಾದ ಗಣೇಶ್ ಆಚಾರ್ಯ ಮತ್ತು ಸೃಷ್ಟಿ ವರ್ಮಾ ಅವರ ಉಸ್ತುವಾರಿಯಲ್ಲಿ ಮೂಡಿಬಂದಿರುವ ಈ ಅದ್ಭುತ ನೃತ್ಯ ಪ್ರದರ್ಶನವು ಪ್ರೇಕ್ಷಕರ ಕಣ್ಣಿಗೆ ಹಬ್ಬದಂತಹ ಮತ್ತು ಎಂದಿಗೂ ಮರೆಯಲಾಗದ ದೃಶ್ಯ ವೈಭವವನ್ನ ಉಣಬಡಿಸಲಿದೆ.

ಸಿಂಧೂಜಾ ಶ್ರೀನಿವಾಸನ್ ಕಂಠಸಿರಿ

ಸಂಗೀತದ ವಿಷಯಕ್ಕೆ ಬಂದರೆ, ಪ್ರತಿಭಾವಂತ ಜೋಡಿ ಜುನೈದ್ ಕುಮಾರ್ ಮತ್ತು ಅಭೆ ಅವರು ಈ ಹಾಡಿಗೆ ಭಕ್ತಿ ಮತ್ತು ಆಧ್ಯಾತ್ಮ ಮೇಳೈಸಿದ ಸುಮಧುರ ಸಂಗೀತ ನೀಡಿರುವುದು ವಿಶೇಷ. ಮಾಧುರಿ ಶೇಷಾದ್ರಿ ಅವರು ಬರೆದಿರುವ ಸ್ಫೂರ್ತಿದಾಯಕ ಸಾಹಿತ್ಯವು ಹಾಡಿನ ಆತ್ಮದಂತೆ ಕೆಲಸ ಮಾಡಿದ್ರೆ, ಖ್ಯಾತ ಗಾಯಕಿ ಸಿಂಧೂಜಾ ಶ್ರೀನಿವಾಸನ್ ತಮ್ಮ ಶಕ್ತಿಯುತ ಕಂಠದಾನದ ಮೂಲಕ ಈ ಹಾಡಿಗೆ ಜೀವ ತುಂಬಿದ್ದಾರೆ. ಈ ಹಾಡು ಕೇಳುಗರನ್ನ ಒಂದು ದೈವಿಕ ಲೋಕಕ್ಕೆ ಕರೆದೊಯ್ಯುವ ಭರವಸೆಯನ್ನ ಚಿತ್ರತಂಡ ನೀಡಿದೆ.

ತಾಂತ್ರಿಕವಾಗಿಯೂ ನಾಗಬಂಧಂ ಸಿನಿಮಾ ಅತ್ಯಂತ ಬಲಿಷ್ಠವಾದ ತಂಡವನ್ನ ಹೊಂದಿದೆ. ಸೌಂದರ್ ರಾಜನ್ ಎಸ್ ಅವರ ಅಮೋಘ ಛಾಯಾಗ್ರಹಣ ಹಾಗೂ ಆರ್.ಸಿ ಪ್ರಣವ್ ಅವರ ಚುರುಕಾದ ಸಂಕಲನ ಕಾರ್ಯವು ಚಿತ್ರದ ಸಿನಿಮಾಟೋಗ್ರಫಿಗೆ ಹೊಸ ಆಯಾಮ ನೀಡಿದೆ. ಕಲಾ ನಿರ್ದೇಶಕ ಅಶೋಕ್ ಕುಮಾರ್ ಅವರು ಈ ಕಥೆಗೆ ಪೂರಕವಾದ ಅದ್ದೂರಿ ಮತ್ತು ಕಲಾತ್ಮಕ ಲೋಕವನ್ನೇ ಕ್ರಿಯೇಟ್ ಮಾಡಿದ್ದು, ನಿರ್ಮಾಣ ವಿನ್ಯಾಸದ ಜವಾಬ್ದಾರಿಯನ್ನ ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಾರೆ. ಈ ಪ್ರತಿಯೊಂದು ಅಂಶವೂ ಸಿನಿಮಾವನ್ನ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಪೂರಕವಾಗಿವೆ.



### ಹೈಲೈಟ್ಸ್ :

- ಪ್ಯಾನ್ ಇಂಡಿಯಾ ಮಟ್ಟದ ದೃಶ್ಯ ವೈಭವದ ಸಿನಿಮಾ ನಾಗಬಂಧಂ
- ಭಗವಾನ್ ಶ್ರೀಮನ್ನಾರಾಯಣನಿಗೆ ಅರ್ಪಿತವಾದ ಆಧ್ಯಾತ್ಮಿಕ ಗೀತೆ ರಿಲೀಸ್‌ಗೆ ಸಜ್ಜು
- ಭಾರತದ ವಿವಿಧ ಶೈಲಿಯ ಸುಮಾರು ಸಾವಿರ ನೃತ್ಯ ಕಲಾವಿದರ ಭರ್ಜರಿ ಪ್ರದರ್ಶನ

» **ಮಾರ್ಚ್ 4ರಂದು ಟಾಕ್ಸಿಕ್ ನೋಡಿದ್ದ ಯಶ್ ಶಾಕ್ ಆಗಿದ್ದರಂತೆ. ವಿಎಫ್‌ಎಕ್ಸ್ ಗುಣಮಟ್ಟ ಬಹಳ ಕೆಟ್ಟದಾಗಿದೆ ಎಂದು ಯಶ್ ಬೇಸರಗೊಂಡಿದ್ದಾರೆ. ಹಾಗಾಗಿ ಅದನ್ನು ಸರಿಪಡಿಸಿಕೊಂಡು ಸಿನಿಮಾ ತೆರೆಗೆ ತರುವ ಮನಸ್ಸು ಮಾಡಿದ್ದಾರೆ ಎನ್ನಲಾಗ್ತಿದೆ. ಇದೇ ಕಾರಣಕ್ಕೆ ತಬಾಹಿ ವೀಡಿಯೋ ಸಾಂಗ್ ಬಿಡುಗಡೆ ಮಾಡಲು ಚಿತ್ರತಂಡ ಹಿಂದೇಟು ಹಾಕಿದ್ದಾಗಿ ಹೇಳಲಾಗ್ತಿದೆ.**

## ಟಾಕ್ಸಿಕ್ ಸಿನಿಮಾ ರಿಲೀಸ್ ಡೇಟ್ ಮುಂದೂಡಲು ಯಶ್ ಗಡ್ಡವೇ ಕಾರಣವಾಯ್ತಾ?

ರಾಕಿಂಗ್ ಸ್ಟಾರ್ ಯಶ್ ನಟನೆಯ ಟಾಕ್ಸಿಕ್ ಸಿನಿಮಾ ರಿಲೀಸ್ 3 ತಿಂಗಳು ಮುಂದೂಡಲಾಗಿದೆ. ಇರಾನ್- ಇಸ್ರೇಲ್ ಯುದ್ಧದ ಹಿನ್ನೆಲೆಯಲ್ಲಿ ಅರಬ್ ದೇಶಗಳಲ್ಲಿ ಸಿನಿಮಾ ಕಲೆಕ್ಷನ್ ಮೇಲೆ ಪರಿಣಾಮ ಬೀರಬಹುದು ಎನ್ನುವ ಕಾರಣಕ್ಕೆ ಈ ನಿರ್ಧಾರಕ್ಕೆ ಬಂದಿರುವುದಾಗಿ ಚಿತ್ರತಂಡ ಹೇಳಿದೆ. ಆದರೆ ಸಿನಿಮಾ ರಿಲೀಸ್ ಡೇಟ್ ಪೋಸ್ಟ್‌ಪೋನ್ ಮಾಡಲು ಬೇರೆಯದ್ದೇ ಕಾರಣ ಇದೆ ಎಂದು ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ನಡ್ತೀದೆ.

ಮಾರ್ಚ್ 19ಕ್ಕೆ ಟಾಕ್ಸಿಕ್ ಸಿನಿಮಾ ವಿಶ್ವದಾದ್ಯಂತ ತೆರೆಗೆ ಬರಬೇಕಿತ್ತು. ಇಷ್ಟೊತ್ತಿಗೆ ಟ್ರೈಲರ್ ರಿಲೀಸ್ ಆಗಬೇಕಿತ್ತು. ಆದರೆ ಸಿನಿಮಾ ಬಿಡುಗಡೆಗೆ 15 ದಿನ ಬಾಕಿ ಇರುವಾಗ ಚಿತ್ರತಂಡ ಶಾಕ್ ಕೊಟ್ಟಿತ್ತು. ಧುರಂಧರ್-2 ಹಾಗೂ ಟಾಕ್ಸಿಕ್ ಚಿತ್ರಗಳು ಒಂದೇ ದಿನ ತೆರೆಗಪ್ಪಳಿಸಬೇಕಿತ್ತು. ಇದು ದಶಕದ ಬಾಕ್ಸಾಫೀಸ್ ಕ್ಲ್ಯಾಶ್ ಎಂದೇ ಹೇಳಲಾಗಿತ್ತು. ಒಂದು ವೇಳೆ ಧುರಂಧರ್-2 ರಿಲೀಸ್ ತಡವಾಗಬಹುದು ಎನ್ನುವ ಊಹಾಪೋಹ ಶುರುವಾಗಿತ್ತು. ಆದರೆ ಅಷ್ಟರಲ್ಲೇ ಟಾಕ್ಸಿಕ್ ಶಾಕ್ ಎದುರಾಗಿತ್ತು.

ಮಾರ್ಚ್ 4ರಂದು ಟಾಕ್ಸಿಕ್ ನೋಡಿದ್ದ ಯಶ್ ಶಾಕ್ ಆಗಿದ್ದರಂತೆ. ವಿಎಫ್‌ಎಕ್ಸ್ ಗುಣಮಟ್ಟ ಬಹಳ ಕೆಟ್ಟದಾಗಿದೆ ಎಂದು ಯಶ್ ಬೇಸರಗೊಂಡಿದ್ದಾರೆ. ಹಾಗಾಗಿ ಅದನ್ನು ಸರಿಪಡಿಸಿಕೊಂಡು ಸಿನಿಮಾ ತೆರೆಗೆ ತರುವ ಮನಸ್ಸು ಮಾಡಿದ್ದಾರೆ ಎನ್ನಲಾಗ್ತಿದೆ. ಇದೇ ಕಾರಣಕ್ಕೆ ತಬಾಹಿ ವೀಡಿಯೋ ಸಾಂಗ್ ಬಿಡುಗಡೆ ಮಾಡಲು ಚಿತ್ರತಂಡ ಹಿಂದೇಟು ಹಾಕಿದ್ದಾಗಿ ಹೇಳಲಾಗ್ತಿದೆ.

ಗುಣಮಟ್ಟದ ವಿಚಾರದಲ್ಲಿ ರಾಜಿ ಆಗುವುದು ಬೇಡ ಎಂದು ಯಶ್ ಈ ನಿರ್ಧಾರಕ್ಕೆ ಬಂದಿರುವುದಾಗಿ ಎನ್ನಲಾಗ್ತಿದೆ. ರಾಯ ಪಾತ್ರದಲ್ಲಿ ಯಶ್ ಕಾಣಿಸಿಕೊಂಡಿರುವ ಒಂದಷ್ಟು ದೃಶ್ಯಗಳನ್ನು ರೀ-ಶೂಟ್ ಮಾಡಬೇಕು ಎಂದು ಮನಸ್ಸು ಮಾಡಿದ್ದಾರೆ, ಸದ್ಯ ಯಶ್ ಗಡ್ಡಕ್ಕೆ ಕತ್ತರಿ ಬಿದ್ದಿದೆ. ಹಾಗಾಗಿ ಎರಡು ತಿಂಗಳು ಬಿಟ್ಟು ಆ ದೃಶ್ಯಗಳನ್ನು ರೀ-ಶೂಟ್ ಮಾಡಿ ಬಳಿಕ ಜೂನ್ 4ರಂದು ಸಿನಿಮಾ ಬಿಡುಗಡೆಗೆ ಮನಸ್ಸು ಮಾಡಿದ್ದಾರೆ ಎನ್ನುವ ಗುಸುಗುಸು ಕೇಳಿಬರ್ತಿದೆ. ಆದರೆ ಚಿತ್ರತಂಡದ ಆಪ್ತ ಮೂಲಗಳು ಈ ವದಂತಿಗಳನ್ನು ತಳ್ಳಿ ಹಾಕಿದೆ. ಇಸ್ರೇಲ್-ಇರಾನ್ ಯುದ್ಧದ ಹಿನ್ನೆಲೆಯಲ್ಲೇ ಸಿನಿಮಾ ರಿಲೀಸ್ ಮುಂದೂಡಲಾಗಿದೆ ಎಂದಿದ್ದಾರೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಕಾರಣಕ್ಕೆ ಟಾಕ್ಸಿಕ್ ಸಿನಿಮಾ ರಿಲೀಸ್ ಮುಂದೂಡಲಾಯಿತು. ಗಲ್ಫ್ ರಾಷ್ಟ್ರಗಳು ಚಿತ್ರಕ್ಕೆ ದೊಡ್ಡ ಮಾರ್ಕೆಟ್. ಮಾರ್ಚ್ 8ರಂದು ಟ್ರೈಲರ್ ರಿಲೀಸ್ ಮಾಡಲು ಎಲ್ಲಾ ಸಿದ್ಧತೆ ನಡೆದಿತ್ತು. ತಬಾಹಿ ವೀಡಿಯೋ ಸಾಂಗ್ ಕೂಡ ಬರಬೇಕಿತ್ತು. ಇಸ್ರೇಲ್-ಇರಾನ್ ಯುದ್ಧದ ಕಾರಣಕ್ಕೆ ಎಲ್ಲವನ್ನು ನಿಲ್ಲಿಸಲಾಯಿತು. ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಸಿನಿಮಾ ನಿರ್ಮಾಣವಾಗಿದೆ. ಹಾಗಾಗಿ ಅಂತರಾಷ್ಟ್ರೀಯ ಮಾರ್ಕೆಟ್ ಬಹಳ ಮುಖ್ಯ ಎಂದು ಟಾಕ್ಸಿಕ್ ಚಿತ್ರದ ಆಪ್ತ ಮೂಲಗಳಿಂದ ಮಾಹಿತಿ ಸಿಕ್ಕಿದೆ.

ವಿಎಫ್‌ಎಕ್ಸ್, ರೀ-ಶೂಟ್ ಕಾರಣಕ್ಕೆ ಸಿನಿಮಾ ರಿಲೀಸ್ ತಡವಾಗ್ತಿದೆ ಎನ್ನುವುದೆಲ್ಲಾ ಶುದ್ಧ ಸುಳ್ಳು.. ಯಾರು ಇಂತಹ ವದಂತಿ ಹರಡುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ. ಧುರಂದರ್-2 ಚಿತ್ರದ ವಿಚಾರದಲ್ಲಿ ಇಂತಹ ಸುಳ್ಳು ಸುದ್ದಿ ಹಬ್ಬಿಸಿದ್ದರು. ಈಗ ಟಾಕ್ಸಿಕ್ ಚಿತ್ರದ ಬಗ್ಗೆ ಮಾತನಾಡುತ್ತಿದ್ದಾರೆ. ನೆಗೆಟಿವ್ ಯಾವಾಗಲೂ ಬೇಗ ಗಮನ ಸೆಳೆಯುತ್ತದೆ. ಹಾಗಾಗಿ ಇಂತಹ ಸುಳ್ಳು ಸುದ್ದಿ ವೈರಲ್ ಆಗುತ್ತಿದೆ ಎಂದು ತಿಳಿಸಿದ್ದಾರೆ.

ಗೀತು ಮೋಹನ್ ದಾಸ್ ನಿರ್ದೇಶನದ ಈ ಆಕ್ಷನ್ ಥ್ರಿಲ್ಲರ್ ಸಿನಿಮಾ ಭಾರೀ ನಿರೀಕ್ಷೆ ಹುಟ್ಟಾಕ್ಕಿದೆ. ನಯನತಾರಾ, ಕಿಯಾರಾ ಅದ್ವಾನಿ, ಹುಮಾ ಖುರೇಷಿ, ರುಕ್ಮಿಣಿ ವಸಂತ್ ಸೇರಿ ದೊಡ್ಡ ತಾರಾಗಣ ಚಿತ್ರದಲ್ಲಿದೆ. ರವಿ ಬಸ್ರೂರು ಜೊತೆ ಇನ್ನು ನಾಲ್ವರು ಸಂಗೀತ ನಿರ್ದೇಶಕರು ಚಿತ್ರಕ್ಕೆ ಮ್ಯೂಸಿಕ್ ಕಂಪೋಸ್ ಮಾಡಿದ್ದಾರೆ. ಪ್ಯಾನ್ ವರ್ಲ್ಡ್ ಮಟ್ಟದಲ್ಲಿ ಸಿನಿಮಾ ಬಿಡುಗಡೆ ಪ್ರಯತ್ನ ನಡ್ತೀದೆ.






ಡಾರ್ಲಿಂಗ್ ಕೃಷ್ಣಗೆ ಸ್ಯಾಂಡಲ್‌ವುಡ್‌ನಲ್ಲಿ ಸೂಪರ್ ಸಕ್ಸಸ್ ಕೊಟ್ಟ ಸಿನಿಮಾ ಲವ್ ಮಾಕ್ಟೇಲ್. ಈ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಗೆಲ್ತು ಅನ್ನೋದಷ್ಟೇ ಅಲ್ಲ, ಇದು ಡಾರ್ಲಿಂಗ್ ಕೃಷ್ಣ ವೃತ್ತಿ ಬದುಕಿಗೆ ಹೊಸ ತಿರುವು ಕೊಟ್ಟಿತ್ತು. ಒಂದೊಳ್ಳೆ ಯಶಸ್ಸಿಗೆ ಕಾಯುತ್ತಿದ್ದ ಕೃಷ್ಣಗೆ ಗೆಲುವಿನ ರುಚಿ ತೋರಿಸಿತ್ತು. ಸ್ಯಾಂಡಲ್‌ವುಡ್‌ನಲ್ಲಿ ಸ್ಟಾರ್ ಪಟ್ಟ ತಂದು ಕೊಟ್ಟಿತ್ತು.




## ಲವ್ ಮಾಕ್ಟೇಲ್ ಫ್ಯಾನ್ಸ್‌ಗೆ ನಿರಾಸೆ.. ಲವ್ ಮಾಕ್ಟೇಲ್ 4 ಬರೋದಿಲ್ಲ?

ಈ ಸಿನಿಮಾ ಡಾರ್ಲಿಂಗ್ ಕೃಷ್ಣಗೆ ಸಿಕ್ಕಾಪಟ್ಟೆ ಸ್ಪೆಷಲ್. ಯಾಕಂದ್ರೆ, ಯಾವ ನಿರ್ದೇಶಕನಿಂದಲೂ ಕೃಷ್ಣಗೆ ಸಕ್ಸಸ್ ಕೊಡಿಸುವುದಕ್ಕೆ ಸಾಧ್ಯವಾಗಿರಲಿಲ್ಲ. ತನ್ನ ಯಶಸ್ಸನ್ನು ತಾನೇ ಸೃಷ್ಟಿಸಿಕೊಂಡ ಕೃಷ್ಣ ಲವ್ ಮಾಕ್ಟೇಲ್ ನಿಜಕ್ಕೂ ಸ್ಪೆಷಲ್. ಅದೇ ಯಶಸ್ಸು ಮುಂದುವರೆದು ಲವ್ ಮಾಕ್ಟೇಲ್ 2 ಆಯ್ತು. ಈಗ ಅದು ಲವ್ ಮಾಕ್ಟೇಲ್ 3 ವರೆಗೂ ಕರೆದುಕೊಂಡು ಬಂದಿದೆ.

ಹಾಗಿದ್ದರೆ, ಲವ್ ಮಾಕ್ಟೇಲ್ ಕೇವಲ ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್ ಅವರಿಗಷ್ಟೇ ವಿಶೇಷನಾ? ಖಂಡಿತಾ ಇಲ್ಲ. ಈ ಸಿನಿಮಾಗೆ ಒಂದಿಷ್ಟು ಫಾಲೋವರ್ಸ್ ಇದ್ದಾರೆ. ಯುವ ಪ್ರೇಮಿಗಳನ್ನು ಅತೀ ಹೆಚ್ಚು ಕಾಡಿದ ಸಿನಿಮಾವಿದು. ಹೀಗಾಗಿ ಲವ್ ಮಾಕ್ಟೇಲ್ 3 ಸಿನಿಮಾ ನೋಡುವುದಕ್ಕೆ ತುದಿಗಾಲಲ್ಲಿ ನಿಂತಿದ್ದರು. ಈಗ ಆ ಸಿನಿಮಾದ ಒಂದು ಝಲಕ್ ಸಿಕ್ಕಿದೆ. ಲವ್ ಮಾಕ್ಟೇಲ್ 3 ಟ್ರೈಲರ್ ರಿಲೀಸ್ ಆಗಿದ್ದೇನೋ ಖುಷಿಯಿದೆ. ಅಷ್ಟೇ ನಿರಾಸೆನೂ ಆಗಿದೆ. ಅದೇನದು? ಅಂತ ನೋಡುವುದಕ್ಕೆ ಮುಂದೆ ಓದಿ.

ಕಳೆದ ಎರಡು ಅಧ್ಯಾಯಗಳು ಡಾರ್ಲಿಂಗ್ ಕೃಷ್ಣ ಹಾಗೂ ಮಿಲನಾ ನಾಗರಾಜ್‌ಗೆ ಯಶಸ್ಸು ಕೊಟ್ಟಿವೆ. ಹೀಗಾಗಿ ಲವ್ ಮಾಕ್ಟೇಲ್ 3 ಕೂಡ ಬಾಕ್ಸಾಫೀಸ್‌ನಲ್ಲಿ ಯಶಸ್ಸು ಕಾಣಬಹುದೆಂಬ ನಿರೀಕ್ಷೆಯಿದೆ. ಲವ್ ಮಾಕ್ಟೇಲ್‌ನ ಮೊದಲೆರಡು ಭಾಗಗಳ ಬಳಿಕ ಮತ್ತೊಂದು ಲವ್ ಮಾಕ್ಟೇಲ್ 3 ಟ್ರೈಲರ್ ಕಿಕ್ ಕೊಟ್ಟಿದೆ. ಪ್ರೇಕ್ಷಕರಿಗೆ ಲವ್ ಮಾಕ್ಟೇಲ್ ಜರ್ನಿಯನ್ನು ಮತ್ತೆ ನೆನಪಿಸಿದೆ.

ಲವ್ ಮಾಕ್ಟೇಲ್ 3 ಟ್ರೈಲರ್ ಕಥೆಯ ಬಗ್ಗೆ ಹೆಚ್ಚು ಸುಳಿವನ್ನು ಬಿಟ್ಟುಕೊಡದೇ ಹೋದರೂ, ಈ ಅಧ್ಯಾಯದಲ್ಲಿ ತಂದೆ-ಮಗಳ ನಡುವಿನ ಬಾಂಧವ್ಯವನ್ನು ಹೇಳುವುದಕ್ಕೆ ಡಾರ್ಲಿಂಗ್ ಕೃಷ್ಣ ಹೊರಟಿದ್ದಾರೆ ಅನ್ನೋದು ಸ್ಪಷ್ಟವಾಗಿದೆ. ಇದರಲ್ಲೂ ಕಾಡುವಂತಹ ಲವ್ ಸ್ಟೋರಿ ಇರುತ್ತಾ? ಕೃಷ್ಣ ಮಿಲನಾ ಕಾಂಬಿನೇಷನ್ ಇರುತ್ತಾ? ಅನ್ನೋದು ಸಿನಿಮಾ ನೋಡಿದ ಬಳಿಕವೇ ಗೊತ್ತಾಗುತ್ತೆ.

ಟ್ರೈಲರ್ ರಿಲೀಸ್ ಆದ ಖುಷಿಯಲ್ಲಿ ಅಭಿಮಾನಿಗಳು ಇದ್ದಾರೆ. ಆದರೆ, ಅವರಿಗೆ ಖುಷಿ ಜೊತೆ ನಿರಾಸೆನೂ ಆಗಿದೆ. ಅದಕ್ಕೆ ಕಾರಣ ಟ್ರೈಲರ್‌ನಲ್ಲಿ ರಿವೀಲ್ ಆಗಿರುವ ಒಂದು ವಿಷಯ. ಈ ಯಶಸ್ವಿ ಸೀರಿಸ್‌ನ ಕೊನೆಯ ಅಧ್ಯಾಯ ಲವ್ ಮಾಕ್ಟೇಲ್ 3. ಒಂದು ವೇಳೆ ಲವ್ ಮಾಕ್ಟೇಲ್ 3 ನೂ ಯಶಸ್ಸು ಕಂಡರೆ ನಾಲ್ಕನೇ ಅಧ್ಯಾಯ ಬರಬಹುದು ಅನ್ನೋದು ನಿರೀಕ್ಷೆಯಲ್ಲಿ ಇದ್ದವರಿಗೆ ನಿರಾಸೆಯಾಗಿದೆ. ಈ ಸಿನಿಮಾದ ಟ್ರೈಲರ್‌ನ ಒಂದು ಕಡೆ ಇದು ನನ್ನ ಲೈಫ್‌ನ ಕೊನೆಯ ಅಧ್ಯಾಯ. ಅಂದರೆ, ನಾನು ನಿಮಗೆ ಹೇಳುತ್ತಿರುವ ಕೊನೆಯ ಅಧ್ಯಾಯ. ಎನ್ನುವ ಡೈಲಾಗ್ ಇಂತಹದ್ದೊಂದು ಸುಳಿವು ಕೊಟ್ಟಿದೆ.

ಈ ಡೈಲಾಗ್ ಹಲವು ಸಿನಿಪ್ರಿಯರಿಗೆ ನಿರಾಸೆಗೆ ಕಾರಣವಾಗಿದೆ. ಹೀಗಾಗಿ ಸೋಶಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ಕಾಮೆಂಟ್‌ಗಳು ಬರುತ್ತಿವೆ. ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್ ಜಂಟಿಯಾಗಿ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಡಾರ್ಲಿಂಗ್ ಕೃಷ್ಣ ಆಕ್ಷನ್ ಕಟ್ ಹೇಳಿದ್ದು, ನಕುಲ್ ಅಭ್ಯಂಕರ್ ಟ್ಯೂನ್ ಹಾಕಿದ್ದಾರೆ. ಇದೇ ಮಾರ್ಚ್ 19ರಂದು ಈ ಸಿನಿಮಾ ರಾಜ್ಯಾದ್ಯಂತ ರಿಲೀಸ್ ಆಗುತ್ತಿದೆ.

CMYK CMYK CMYK CMYK

# ಅವೈಜ್ಞಾನಿಕ ಕಾಮಗಾರಿಯಿಂದ ನಿವಾಸಿಗಳಿಗೆ ಸಂಕಷ್ಟ

## ತಕ್ಷಣ ಸರಿಪಡಿಸಲು ಗುತ್ತಿಗೆದಾರರಿಗೆ ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಸೂಚನೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ವಾರ್ಡ್ ಹಾಗೂ ವೈಕುಂಠಬೀದಿಯಲ್ಲಿ ನಡೆಯುತ್ತಿರುವ ರಸ್ತೆ ಹಾಗೂ ಚರಂಡಿ ಕಾಮಗಾರಿಗಳು ಅವೈಜ್ಞಾನಿಕವಾಗಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೀವ್ರ ಅನಾನುಕೂಲ ಉಂಟಾಗಿದ್ದು ಕೂಡಲೇ ಸಮಸ್ಯೆಯನ್ನು ಸರಿಪಡಿಸಬೇಕೆಂದು ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಸೂಚನೆ ನೀಡಿದರು.

ಈ ಕುರಿತು ಮಾತನಾಡಿದ ಅವರು, ಪಟ್ಟಣದಲ್ಲಿ ಕೆಲವು ಪ್ರಮುಖ ವಾರ್ಡ್‌ಗಳಲ್ಲಿ ಪೈಪ್‌ಲೈನ್ ಒಡೆದು ಹೋಗುವುದು ಹಾಗೂ ಯುಜಿಡಿ ಸಮಸ್ಯೆಗಳ ಕುರಿತು ಪುರಸಭೆಗೆ ಹೆಚ್ಚಾಗಿ ದೂರುಗಳು ಬರುತ್ತಿವೆ. ಇದರಿಂದ ತಕ್ಷಣ ಸಮಸ್ಯೆ ಪರಿಹರಿಸಲು ಕಂಟ್ರಾಕ್ಟರ್‌ಗಳಿಗೆ ಸೂಚನೆ ನೀಡಿ, ವರ್ಕರ್‌ಗಳನ್ನು ಸ್ಥಳದಲ್ಲೇ ಇಟ್ಟು ಪೈಪ್‌ಲೈನ್ ಒಡೆದು ಹೋದಾಗ ತಕ್ಷಣ ದುರಸ್ತಿ ಮಾಡುವಂತೆ ಆದೇಶಿಸಲಾಗಿದೆ ಎಂದು ಹೇಳಿದರಲ್ಲದೆ, ಕುಡಿಯುವ ನೀರಿನ ವ್ಯವಸ್ಥೆಗೆ ಯಾವುದೇ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಆದರೆ ಈಗ ನಡೆಯುತ್ತಿರುವ ಕಾಮಗಾರಿಗಳು ಸರಿಯಾದ ಯೋಜನೆಯಿಲ್ಲದೆ ನಡೆಯುತ್ತಿವೆ. ರಸ್ತೆ ಪಕ್ಕದಲ್ಲಿ ಮಣ್ಣು ಹಾಕಿರುವುದರಿಂದ ಮಳೆ ಬಂದರೆ ಅದು ಕೆಸರಾಗಿ ಜನರಿಗೆ ಅಪಾಯ ಉಂಟಾಗುವ ಸಾಧ್ಯತೆ ಇದೆ. ವಿಶೇಷವಾಗಿ ಈ ಪ್ರದೇಶದಲ್ಲಿ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಯಾರಾದರೂ ಜಾರಿ ಬಿದ್ದು ಗಾಯಗೊಂಡರೆ ಅದರ ಹೊಣೆ ಯಾರು ಹೊರುತ್ತಾರೆ ಎಂದು ಪ್ರಶ್ನಿಸಿದರು.



ಈ ಬಗ್ಗೆ ಪಿಡಬ್ಲ್ಯುಡಿ ಇಂಜಿನಿಯರ್‌ಗಳಿಗೆ ಹಲವು ಬಾರಿ ದೂರವಾಣಿ ಮೂಲಕ ಮಾಹಿತಿ ನೀಡಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ಈಗಾಗಲೇ ಆರು ತಿಂಗಳಿನಿಂದ ಇದೇ ಪರಿಸ್ಥಿತಿ ಮುಂದುವರಿದಿದೆ. ರಸ್ತೆ ಕೆದಕಿರುವುದರಿಂದ ಆಟೋ, ಆಂಬುಲೆನ್ಸ್ ಸಂಚಾರಕ್ಕೂ ತೊಂದರೆ ಆಗುತ್ತಿದೆ. ಮಕ್ಕಳು ಶಾಲೆಗೆ ಹೋಗುವುದಕ್ಕೂ, ಜನರು ದೇವಸ್ಥಾನ ಅಥವಾ ಮುಖ್ಯ ರಸ್ತೆಗೆ ತೆರಳುವುದಕ್ಕೂ ಕಷ್ಟವಾಗುತ್ತಿದೆ ಎಂದು ಅವರು ತಮ್ಮ ಅಳಲು ತೋಡಿಕೊಂಡರು.

ಈ ವಿಷಯವನ್ನು ಶಾಸಕರ ಗಮನಕ್ಕೂ ತರಲಾಗಿದೆ. ಆದರೆ ಯಾವುದೇ ಕ್ರಮ ಕೈಗೊಳ್ಳದಿರುವುದು ಬೇಸರದ ಸಂಗತಿ. ಕೆಲವೊಮ್ಮೆ ಪತ್ರಿಕೆಯಲ್ಲಿ ಹೇಳಿಕೆ ನೀಡಿದ ನಂತರ ಮಾತ್ರ ಸ್ವಲ್ಪ ಕೆಲಸ ಮಾಡಿ ಮತ್ತೆ ನಿಲ್ಲಿಸುತ್ತಾರೆ. ಚರಂಡಿ ಕಾಮಗಾರಿಯೂ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ಆರೋಪಿಸಿದರು.

ಪುರಸಭೆ ಮಾಜಿ ಅಧ್ಯಕ್ಷೆ ಹಾಗೂ ಹಾಲಿ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಇನ್ನೂ ಒಂದು ವಾರ ಸಮಯ ನೀಡಲಾಗುತ್ತದೆ. ಅದರೊಳಗೆ ಸಮಸ್ಯೆ ಪರಿಹಾರವಾಗದಿದ್ದರೆ 7 ನೇ ವಾರ್ಡ್ ನಿವಾಸಿಗಳೊಂದಿಗೆ ಸೇರಿ ಚರಂಡಿ ತೆರವು ಮಾಡುವಂತಹ ಕ್ರಮ ಕೈಗೊಳ್ಳಬೇಕಾದ ಪರಿಸ್ಥಿತಿ ಉಂಟಾಗಬಹುದು ಎಂದು ಎಚ್ಚರಿಸಿದರು.

ಇದೇ ವೇಳೆ ವೈಕುಂಠ ಬೀದಿ ವಾರ್ಡ್ ನಿವಾಸಿಗಳಾದ ವಿಜಯಕೇಶವ ಹಾಗೂ ಕಿರಣ್ ಮಾತನಾಡಿ, ಇಲ್ಲಿ ನಿರ್ಮಿಸುತ್ತಿರುವ ಡ್ರೈನ್ ವ್ಯವಸ್ಥೆಯಲ್ಲಿ ನೀರಿನ ಹರಿವು ಸರಿಯಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದು ಹೇಳಿದರು. ಮಳೆ ಬಂದಾಗ ಮಾತ್ರ ನೀರು ಯಾವ ದಿಕ್ಕಿಗೆ ಹರಿಯುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ರಸ್ತೆ ಎತ್ತರ ಹೆಚ್ಚಿಸಿರುವುದರಿಂದ ನೀರು ಸರಿಯಾಗಿ ಡ್ರೈನ್‌ಗೆ ಸೇರುತ್ತದೆಯೇ ಎಂಬುದು ಅನುಮಾನವಾಗಿದೆ ಎಂದು ಅವರು ತಿಳಿಸಿದರು.

ಈ ಕಾಮಗಾರಿ ಯುಗಾದಿ ಹಬ್ಬದೊಳಗೆ ಮುಗಿಸಲು ಅಧಿಕಾರಿಗಳು ತಿಳಿಸಿದ್ದಾರೆ. ಯುಗಾದಿ ಉತ್ಸವ ಮಾರ್ಚ್ 19 ರಂದು ನಡೆಯಲಿರುವುದರಿಂದ ಅದರೊಳಗೆ ರಸ್ತೆ ಡಾಂಬರೀಕರಣ ಸೇರಿದಂತೆ ಉಳಿದ ಕೆಲಸಗಳನ್ನು ಪೂರ್ಣಗೊಳಿಸುವ ಸಾಧ್ಯತೆ ಇದೆ ಎಂದಿದ್ದಾರೆ. ಜೊತೆಗೆ ಬೀದಿ ದೀಪಗಳಿಗಾಗಿ ಎಲ್‌ಇಡಿ ಸ್ಟ್ರೀಟ್ ಲೈಟ್ ವ್ಯವಸ್ಥೆಗೆ ಯುಜಿ ಕೇಬಲ್ ಅಳವಡಿಕೆ ಕಾರ್ಯ ಬಹುತೇಕ ಮುಗಿದಿದ್ದು, ಪಿಲ್ಲರ್ ಮೌಂಟ್ ಹಾಗೂ ಕನೆಕ್ಷನ್ ಮಾತ್ರ ಬಾಕಿ ಇದೆ. ಆ ಕೆಲಸವೂ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ಅವರು ಮಾಹಿತಿ ನಮಗೆ ನೀಡಿದ್ದಾರೆ ಎಂದು ಹೇಳಿದರು.

ಈ ವೇಳೆ ಯುಡಿಸಿ ಎಇಇ ಇಂಜಿನಿಯರ್ ಆನಂದ್ ಕಾಂಬ್ಳೆ ಮಾತನಾಡಿ, ನಮಗೆ ಮಾಧ್ಯಮದ ಮೂಲಕ ಕೆಲವು ಅನಾನುಕೂಲತೆಗಳ ಬಗ್ಗೆ ಮಾಹಿತಿ ಬಂದಿದ್ದು ಅದರ ಬಗ್ಗೆ ಗಮನಹರಿಸಿ ನ್ಯೂನ್ಯತೆಗಳನ್ನು ಸರಿಪಡಿಸಿ ಉತ್ತಮ ಗುಣಮಟ್ಟದ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕೆಲವು ಲೋಪದೋಷಗಳಿದ್ದರೂ ಅದನ್ನು ಸರಿಪಡಿಸಲಾಗುವುದು ಎಂದರು.

ಈ ವೇಳೆ ಸದಸ್ಯೆ ಜಮೀಲಾ ತೌಫಿಕ್, ಅಕ್ರಂ ಇನ್ನಿತರರು ಸ್ಥಳದಲ್ಲಿ ಹಾಜರಿದ್ದರು.

## ಮಾ.15 ರಂದು ವಿದ್ಯುತ್ ವ್ಯತ್ಯಯ



• ಪ್ರಜೋದಯ ವರದಿ

**ಹಾಸನ:** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಾಸನ ಕೆಇಎಡಿಬಿ ಉಪವಿಭಾಗದ ವ್ಯಾಪ್ತಿಯಲ್ಲಿ ಎನ್‌ಎಚ್-75 ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಚಾಲನೆಯಲ್ಲಿದ್ದು, ಹೆದ್ದಾರಿ ಅಗಲೀ ಕರಣದ ಸಮಯದಲ್ಲಿ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಬೇಕಾಗಿ ರುವುದರಿಂದ ಮಾ 15 ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಮೈಕ್ರೋವೇವ್ ಫೀಡರ್‌ನ ವ್ಯಾಪ್ತಿಗೆ ಒಳಪಡುವ ಬಿಟ್ಟಗೋಡನಹಳ್ಳಿ, ಹುಲ್ಲೇನಹಳ್ಳಿ, ದೇವೇಗೌಡ ನಗರ, ಕೃಷ್ಣ ನಗರ, ಸಂಕಲಾಪುರಗಡಿ, ಕೋಕ್ಕನಘಟ್ಟ, ಹನುಮಂತಪುರ, ಮಲ್ಲಪ್ಪನಹಳ್ಳಿ, ಫೈವುಡ್, ಯರೆಬೊರೆ ಕಾವಲು, ಕ್ರಷರ್‌ಗಳಿಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಮಾ.24 ರಂದು ಬಹಿರಂಗ ಹರಾಜು

**ಹಾಸನ:** ಅಬಕಾರಿ ಇಲಾಖೆಯ ವಿವಿಧ ವಲಯ ಕಚೇರಿಗಳಲ್ಲಿ ಅಬಕಾರಿ ಪ್ರಕರಣಗಳಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿಯಾಗದೆ ಇರುವ ವಾಹನಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ಮಾ.24 ರಂದು ವಲಯ ಕಚೇರಿಯ ಆವರಣದಲ್ಲಿ ವಿಲೇವಾರಿ ಮಾಡಲಾಗುತ್ತದೆ.

ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಕಚೇರಿ ಸಮಯದಲ್ಲಿ ವಾಹನಗಳನ್ನು ಪರಿಶೀಲಿಸಿಕೊಳ್ಳಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಹಾಸನ ಹಾಗೂ ಸಕಲೇಶಪುರ ಉಪವಿಭಾಗ ಕಚೇರಿಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು.

## ಅಂಚೆ ಅದಾಲತ್

• ಪ್ರಜೋದಯ ವರದಿ

ಹಾಸನ: ಅಂಚೆ ವ್ಯವಸ್ಥೆ ಕುಂದು ಕೊರತೆಗಳ ಅಹವಾಲುಗಳನ್ನು ನೀಡಲು ಅಂಚೆ ಅದಾಲತ್‌ನ್ನು ಮಾ.17 ರಂದು ಸಂಜೆ 4 ಗಂಟೆಗೆ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

# ಭಾರತೀಯ ತೈಲ ಟ್ಯಾಂಕರ್ ಸಂಚಾರಕ್ಕೆ ಇರಾನ್ ಅನುಮತಿ

## ವಿದೇಶಾಂಗ ಸಚಿವ ಜೈಶಂಕರ್ ಮಾತುಕತೆ ಫಲಪ್ರದ

• ಪ್ರಜೋದಯ ವರದಿ

**ನವದೆಹಲಿ/ಟೆಹ್ರಾನ್:** ವಿಶ್ವದ ಅತ್ಯಂತ ಪ್ರಮುಖ ತೈಲ ಸಾಗಣೆ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಇರಾನ್ ಬಹುತೇಕ ಬಂದ್ ಮಾಡಿರುವ ನಡುವೆಯೇ, ಭಾರತಕ್ಕೆ ಭಾರಿ ನೆಮ್ಮದಿಯ ಸುದ್ದಿಯೊಂದು ಲಭಿಸಿದೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಇರಾನ್ ಸಚಿವರೊಂದಿಗೆ ನಡೆಸಿದ ಯಶಸ್ವಿ ಮಾತುಕತೆಯ ನಂತರ, ಭಾರತೀಯ ಧ್ವಜ ಹೊಂದಿರುವ ತೈಲ ಟ್ಯಾಂಕರ್‌ಗಳಿಗೆ ಮುಕ್ತವಾಗಿ ಸಂಚರಿಸಲು ಇರಾನ್ ಅನುಮತಿ ನೀಡಿದೆ ಎಂದು ಮೂಲಗಳು ತಿಳಿಸಿವೆ.



ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರೊಂದಿಗೆ ಸರಣಿ ಮಾತುಕತೆ ನಡೆಸಿದ್ದಾರೆ. ಇದರ ಫಲವಾಗಿ ಪುಷ್ಪಕ್ ಮತ್ತು ಪರಿಮಳ್ ಎಂಬ ಹೆಸರಿನ ಎರಡು ಭಾರತೀಯ ತೈಲ ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯ ಮೂಲಕ ಈಗಾಗಲೇ ಸುರಕ್ಷಿತವಾಗಿ ಸಾಗಿವೆ.

ಅಮೆರಿಕ, ಇಸ್ರೇಲ್ ಮತ್ತು ಯುರೋಪಿಯನ್ ರಾಷ್ಟ್ರಗಳ ಹಡಗುಗಳ ಮೇಲೆ ಇರಾನ್ ಕಟ್ಟುನಿಟ್ಟಿನ ನಿರ್ಬಂಧ ಹೇರಿದ್ದರೂ, ಭಾರತದ ಇಂಧನ ಭದ್ರತೆಯನ್ನು ಪರಿಗಣಿಸಿ ಈ ವಿಶೇಷ ವಿನಾಯಿತಿ ನೀಡಲಾಗಿದೆ.

ಇಸ್ರೇಲ್- ಇರಾನ್ ಯುದ್ಧ ಆರಂಭವಾದ ನಂತರ, ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿ ಮುಂಬೈ ಬಂದರು ತಲುಪಿದ ಮೊದಲ ಭಾರತೀಯ ಹಡಗು ಎಂಬ ಹೆಗ್ಗಳಿಕೆಗೆ ಶೆನ್‌ಲಾಂಗ್ ಸೂಯೆಜ್ ಮ್ಯಾಕ್ಸ್ ಪಾತ್ರವಾಗಿದೆ.

**ಭಾರತಕ್ಕೆ ಇದು ಏಕೆ ಮುಖ್ಯ?**

ಭಾರತಕ್ಕೆ ಬೇಕಾದ ಕಚ್ಚಾ ತೈಲ ಮತ್ತು ಅಡುಗೆ ಅನಿಲದ ಸುಮಾರು ಅರ್ಧದಷ್ಟು ಪಾಲು ಈ ಹಾರ್ಮುಜ್ ಜಲಸಂಧಿಯ ಮೂಲಕವೇ ಬರಬೇಕಿದೆ. ಒಂದು ವೇಳೆ ಈ ಮಾರ್ಗ ಸಂಪೂರ್ಣ ಬಂದ್ ಆಗಿದ್ದರೆ ದೇಶದಲ್ಲಿ ಪೆಟ್ರೋಲ್-ಡೀಸೆಲ್ ದರ ಏರಿಕೆಯಾಗುವ ಮತ್ತು ಇಂಧನ ಅಭಾವ ಸೃಷ್ಟಿಯಾಗುವ ಭೀತಿಯಿತ್ತು.

# ಮತ್ತೊಂದು ಸುತ್ತು ಸುಂಕಾಸ್ತ್ರಕ್ಕೆ ಟ್ರಂಪ್ ತಯಾರಿ

• ಪ್ರಜೋದಯ ವರದಿ

**ವಾಷಿಂಗ್ಟನ್:** ಅಮೆರಿಕವು ಇರಾನ್ ಜೊತೆ ಭೀಕರ ಯುದ್ಧ ನಡೆಸುತ್ತಿರುವಾಗ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಲವಾರು ದೇಶಗಳ ಮೇಲೆ ಹೊಸ ಸುಂಕ ಬಾಂಬ್ ಹಾಕಲು ಸಿದ್ಧತೆ ನಡೆಸಿದ್ದಾರೆ. ಟ್ರಂಪ್ ಆಡಳಿತವು ತನ್ನ 16 ದೇಶಗಳ ವ್ಯಾಪಾರ ಪಾಲುದಾರರ ವಿರುದ್ಧ ಹೊಸ ವ್ಯಾಪಾರ ತನಿಖೆಗಳನ್ನು ಪ್ರಾರಂಭಿಸಿದೆ.

ಅಮೆರಿಕ ವ್ಯಾಪಾರ ಕಾಯ್ದೆಯ ಸೆಕ್ಷನ್ 301 (ವ್ಯಾಪಾರ ಕಾಯ್ದೆ 1974) ಅಡಿಯಲ್ಲಿ ಈ ತನಿಖೆಯನ್ನು ನಡೆಸಲಾಗುತ್ತಿದೆ. ಈ ಕಾನೂನಿನಡಿಯಲ್ಲಿ, ಅಮೆರಿಕವು ಯಾವುದೇ ದೇಶದ ಮೇಲೆ ಸುಂಕಗಳನ್ನು, ಅಂದರೆ ಆಮದು ಸುಂಕಗಳನ್ನು ಹೆಚ್ಚಿಸಬಹುದು. ಅಮೆರಿಕ ಸುಪ್ರೀಂ ಕೋರ್ಟ್



ಟ್ರಂಪ್ ಆಡಳಿತದ ಸುಂಕಗಳನ್ನು ವಿಧಿಸುವ ನಿರ್ಧಾರವನ್ನು ಕಾನೂನು ಬಾಹಿರವೆಂದು ಘೋಷಿಸಿದ ನಂತರವೂ ಈ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಪ್ರಪಂಚ ದಾದ್ಯಂತದ ಪ್ರಮುಖ ಆರ್ಥಿಕತೆಗಳನ್ನು ನಿಯಂತ್ರಣದಲ್ಲಿಡಲು ಮತ್ತು ಅವುಗಳ ಮೇಲೆ ಒತ್ತಡ ಹೇರಲು ಟ್ರಂಪ್ ಅವರ ಹೊಸ ತಂತ್ರ ಇದಾಗಿದೆ ಎಂದು ಪರಿಗಣಿಸಲಾಗಿದೆ.

ಈ ತನಿಖೆಯಲ್ಲಿ ಯಾವುದೇ ಅಕ್ರಮಗಳು ಕಂಡುಬಂದರೆ, ಅನೇಕ ದೇಶಗಳ ಮೇಲೆ, ವಿಶೇಷವಾಗಿ ಈ ತನಿಖೆಯ ವ್ಯಾಪ್ತಿಯಲ್ಲಿರುವ 16 ದೇಶಗಳ ಮೇಲೆ ಹೊಸ ಸುಂಕಗಳನ್ನು ವಿಧಿಸಬಹುದು ಎಂದು ಯುಎಸ್ ವ್ಯಾಪಾರ ಪ್ರತಿನಿಧಿ ಜೇಮೀಸನ್ ಗ್ರೀರ್ ಹೇಳಿದ್ದಾರೆ. ಇದು ಚೀನಾ, ಯುರೋಪಿಯನ್ ಒಕ್ಕೂಟ, ಭಾರತ, ಜಪಾನ್, ದಕ್ಷಿಣ ಕೊರಿಯಾ ಮತ್ತು ಮೆಕ್ಸಿಕೊದ ಮೇಲೆ ಪ್ರಮುಖ ಪರಿಣಾಮ ಬೀರಬಹುದು.

ಹೆಚ್ಚಿನ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುವ ದೇಶಗಳು. ಯುಎಸ್‌ಗೆ ಹೆಚ್ಚಿನ ಪ್ರಮಾಣದಲ್ಲಿ ಸರಕುಗಳನ್ನು ಪೂರೈಸುವ ದೇಶಗಳು. ಅವರು ತಮ್ಮ ಸರಕುಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುತ್ತಾರೆ, ಅವುಗಳನ್ನು ಪರಿಶೀಲನೆಗೆ ಒಳಪಡಿಸಲಾಗುತ್ತದೆ. ಅವರು ಯುಎಸ್‌ನಲ್ಲಿನ ದೇಶೀಯ ಕೈಗಾರಿಕೆಗಳಿಗೆ ಹೆಚ್ಚಿನ ಹಾನಿಯನ್ನುಂಟು ಮಾಡುತ್ತಿದ್ದಾರೆ ಎಂದು ಗ್ರೀರ್ ಆರೋಪಿಸಿದ್ದಾರೆ.

16 ದೇಶಗಳ ಪಟ್ಟಿಯಲ್ಲಿ ತೈವಾನ್, ವಿಯೆಟ್ನಾಂ, ಥೈಲ್ಯಾಂಡ್, ಮಲೇಷ್ಯಾ, ಕಾಂಬೋಡಿಯಾ, ಸಿಂಗಾಪುರ, ಇಂಡೋನೇಷ್ಯಾ, ಬಾಂಗ್ಲಾದೇಶ, ಸ್ವಿಟ್ಜರ್ಲೆಂಡ್ ಮತ್ತು ನಾರ್ವೆ ಕೂಡ ಸೇರಿವೆ. ಆದರೆ ಕೆನಡಾವನ್ನು ಈ ಹಿಟ್ ಲಿಸ್ಟ್‌ನಲ್ಲಿ ಸೇರಿಸಲಾಗಿಲ್ಲ. ಇದು ಅಮೆರಿಕದ ದ್ವಂದ್ವತೆಯನ್ನು ಬಹಿರಂಗಪಡಿಸಿದೆ. ಕೆಲವು ಉತ್ಪನ್ನಗಳ ಮೇಲೆ ನೇರವಾಗಿ ನಿರ್ಬಂಧಗಳನ್ನು ವಿಧಿಸಲು ಸ್ವತಂತ್ರ ತನಿಖೆಯನ್ನು ಪ್ರಾರಂಭಿಸಲಾಗಿದೆ ಎಂದು ಅಮೆರಿಕ ಸ್ಪಷ್ಟಪಡಿಸಿದೆ. ಉತ್ಪಾದನೆಗೆ ಬಲವಂತದ ಕಾರ್ಮಿಕರನ್ನು ಬಳಸುವ ಉದ್ಯಮದಲ್ಲಿನ ಎಲ್ಲಾ ಉತ್ಪನ್ನಗಳು ನಿರ್ಬಂಧಗಳಿಗೆ ಒಳಪಟ್ಟಿರುತ್ತವೆ. ಇದು ವಿಶ್ವದ 60 ಕ್ಕೂ ಹೆಚ್ಚು ದೇಶಗಳ ಮೇಲೆ ಪರಿಣಾಮ ಬೀರುತ್ತದೆ.

## ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಸೌಲಭ್ಯ: ಸಹಾಯಕ ಕೃಷಿ ನಿರ್ದೇಶಕ ಪ್ರಕಾಶ್ ಕುಮಾರ್

# ಜಾಯಿಕಾಯಿ ಗಿಡಗಳ ವಿತರಣೆಗೆ ಉತ್ತಮ ಪ್ರತಿಕ್ರಿಯೆ

• ಪ್ರಜೋದಯ ವರದಿ

**ಸಕಲೇಶಪುರ:** ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆಯಡಿ ವೈವಿಧ್ಯಮಯ ಬೆಳೆ ಪದ್ಧತಿ ಮತ್ತು ರೈತರ ಆದಾಯ ಹೆಚ್ಚಿಸಿಕೊಳ್ಳಲು ಜಾಯಿಕಾಯಿ ಗಿಡಗಳ ವಿತರಣೆಗೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಯು.ಎಂ.ಪ್ರಕಾಶ್‌ಕುಮಾರ್ ಅವರು ತಿಳಿಸಿದರು.

ತಾಲ್ಲೂಕು ಕೃಷಿ ಇಲಾಖೆ ಆವರಣದಲ್ಲಿ ಫಲಾನುಭವಿಗಳಿಗೆ ಜಾಯಿಕಾಯಿ ಗಿಡಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು, ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆ ತಾಲ್ಲೂಕಿನ ಬ್ಯಾಕರವಳ್ಳಿ ಮತ್ತು ಕುರುಭತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಎಲ್ಲಾ ರೈತರಿಗೂ ಒಂದು ವರದಾನವಾಗಿದೆ ಎಂದರು.

ಕೃಷಿ ವೈವಿಧ್ಯತೆಗೆ ಪೂರಕವಾಗಿ ತೋಟಗಾರಿಕಾ ಬೆಳೆಗಳಾದ ಜಾಯಿಕಾಯಿ, ಕರಿ ಮೆಣಸು, ಚೆಕ್ಕೆ ಲವಂಗ ಮತ್ತು ಇನ್ನಿತರೆ ಲಾಭದಾಯಕ ತೋಟಗಾರಿಕಾ ಬೆಳೆಗಳನ್ನು ಸಕಲೇಶಪುರ ಭಾಗದ ರೈತರು ವೈವಿಧ್ಯಮಯ ಬೆಳೆ ಪದ್ಧತಿಯನ್ನು ಹೆಚ್ಚಿಸಿ ತಲಾ ನಿವ್ವಳ ಆದಾಯ ಹೆಚ್ಚಿಸಿಕೊಳ್ಳಲು ಈ ಯೋಜನೆ ತಾಲ್ಲೂಕಿನಲ್ಲಿ ಅನುಷ್ಠಾನದಲ್ಲಿದೆ. ಕೆಲವು ದಿನಗಳ ಹಿಂದೆ ಆತ್ಮ ಯೋಜನೆಯಡಿ ತಾಲ್ಲೂಕಿನ ಪ್ರತೀ ಹೋಬಳಿಯ 5 ರೈತರಿಗೆ ಸುಮಾರು 6000 ಸರ್ಕಾರದ ಸಹಾಯಧನದಡಿ



15 ಹೆಣ್ಣು ಮತ್ತು ಒಂದು ಗಂಡು ಸಂತತಿಯ ಆಯ್ದ ಗ್ರಾಫ್ಟಿಂಗ್ ಜಾಯಿಕಾಯಿ ತಳಿಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಯೋಜನೆಯಡಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಒಳಗೊಂಡಂತೆ ಎಲ್ಲಾ ವರ್ಗದ ರೈತ ಫಲಾನುಭವಿಗಳಿಗೂ ಸಮಾನವಾಗಿ, ಶೇ.50ರ ಸರ್ಕಾರದ ಸಹಾಯಧನವಾಗಿ ತಲಾ ಗರಿಷ್ಠ ಒಟ್ಟು 30 ಸಾವಿರ ಸರ್ಕಾರದ ಸಹಾಯಧನ, ಹಸು ಅಥವಾ ಎಮ್ಮೆ ಅಥವಾ ಮೇಕೆ ಖರೀದಿಗೆ ಅಥವಾ ಇತರೆ ಘಟಕ ಅಳವಡಿಸಿಕೊಳ್ಳಲು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಅನುದಾನ ನೀಡಲಾಗುವುದು ಎಂದರು.

ತಾಲ್ಲೂಕಿನಲ್ಲಿ ಈಗಾಗಲೇ ಫಲಾನುಭವಿಗಳು ಹಸು ಅಥವಾ ಎಮ್ಮೆ ಅಥವಾ ಮೇಕೆ ಖರೀದಿಗೆ ಮುಂದಾಗಿದ್ದು, ಸರ್ಕಾರದ ಸಹಾಯ ಪಡೆದಿರುವಂತೆ, ಕೃಷಿ ಸಂಬಂಧಿತ ತೋಟಗಾರಿಕಾ ಘಟಕದಡಿ, ಕರಿಮೆಣಸು ಮತ್ತು ಜಾಯಿಕಾಯಿ ಗಿಡಗಳ ಖರೀದಿಗೆ ಪ್ರೋತ್ಸಾಹಿಸಿರುವುದರಿಂದ, ಕ್ಷೇತ್ರ ಮಟ್ಟದಲ್ಲಿ ಅವುಗಳನ್ನು ನೆಟ್ಟು ಗಿಡಗಳಿಗೆ ಉತ್ತಮ ಪೋಷಣೆ ನೀಡಬೇಕೆಂದು ಕೃಷಿ ಇಲಾಖೆಯಿಂದ ರೈತರಿಗೆ ಕರೆ ನೀಡಿದರು.

ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಹೆತ್ತೂರು ದೇವರಾಜು, ಶ್ರವಣ್‌ಕುಮಾರ್, ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಬಸವರಾಜ್ ರಾಥೋಡ್, ಸುಷ್ಮಾ ಇದ್ದರು.

# ಗರ್ಭಕಂಠ ಕ್ಯಾನ್ಸರ್ ನಿರೋಧಕ ಲಸಿಕೆ ಉಪಯುಕ್ತ

## ಮೂರು ತಿಂಗಳ ಕಾಲ ಅಭಿಯಾನ

• ಪ್ರಜೋದಯ ವರದಿ

**ಅರಕಲಗೂಡು:** ಗರ್ಭಕಂಠ ಕ್ಯಾನ್ಸರ್ ನಿರೋಧಕ ಲಸಿಕಾ ಅಭಿಯಾನವನ್ನು ತಾಲ್ಲೂಕಿನಲ್ಲಿ ಹಮ್ಮಿಕೊಂಡಿದ್ದು ಹೆಣ್ಣು ಮಕ್ಕಳ ಪೋಷಕರು ಇದರ ಪ್ರಯೋಜನ ಪಡೆಯುವಂತೆ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ತಿಳಿಸಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆ ಸಭಾಂಗಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮುಂದಿನ ಮೂರು ತಿಂಗಳ ಕಾಲ ನಡೆಯುವ ಅಭಿಯಾನದಲ್ಲಿ 14 ರಿಂದ 15 ವರ್ಷ ವಯೋಮಿತಿಯ 1550 ಹೆಣ್ಣುಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಮಹಿಳೆಯರಲ್ಲಿ ಗರ್ಭಕೋಶದ ಕ್ಯಾನ್ಸರ್ ಪ್ರಮಾಣ ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ಈ ಲಸಿಕೆ



ಸಹಾಯಕವಾಗಿದೆ. ಇದು ಮಕ್ಕಳ ಆರೋಗ್ಯದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರುವುದಿಲ್ಲ, ಸಾಮಾಜಿಕ ಜಾಲತಾಣಗಳಲ್ಲಿ ಬರುವ ವದಂತಿಗಳಿಗೆ ಕಿವಿಗೊಡದೆ ಹೆಣ್ಣು ಮಕ್ಕಳಿಗೆ ಲಸಿಕೆ ಹಾಕಿಸುವ ಮೂಲಕ ಕ್ಯಾನ್ಸರ್ ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಸಹಕಾರ ನೀಡುವಂತೆ ಅವರು ತಿಳಿಸಿದರು.

ಮಕ್ಕಳ ತಜ್ಞ ಡಾ.ಮಂಜುನಾಥ್ ಲಸಿಕೆಯ ಉಪಯುಕ್ತತೆ ಕುರಿತು ಮಾಹಿತಿ ನೀಡಿದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಟಿ.ಕೆ.ಮಂಜುಳ, ಆಶಾ ಮೆಂಟರ್ ಕವಿತಾ, ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿ ಲೀನಾ ಕುಮಾರಿ ಉಪಸ್ಥಿತರಿದ್ದರು.

# ಬಜೆಟ್‌ನಲ್ಲಿ ಸಿಎಂ ರಿಂದ ಭೌತಿಕ ದಿವಾಳಿತನ ಪ್ರದರ್ಶನ

## ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ರಾಜ್ಯ ಸರ್ಕಾರದಿಂದ ಕೇಂದ್ರದ ವಿರುದ್ಧ ಆರೋಪ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಸರ್ಕಾರದ ಈ ಸಾಲಿನ ಬಜೆಟ್ ಜನರ ನಿರೀಕ್ಷೆಯನ್ನು ಹುಸಿ ಮಾಡಿದೆ. ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭೌತಿಕ ದಿವಾಳಿತನವನ್ನು ಪ್ರದರ್ಶಿಸಿದ್ದಾರೆ. ಈ ಬಜೆಟ್ ನೋಡಿದರೆ ಮುಖ್ಯಮಂತ್ರಿಗಳು ಅಸಾಯಕರಾಗಿ ಕೈ ಚೆಲ್ಲಿರುವ ಭಾವನೆ ಜನರಿಗೆ ಬಂದಿದೆ ಎಂದು ಬಿಜೆಪಿ ಸದಸ್ಯ ಬಿ.ವೈ. ವಿಜಯೇಂದ್ರ ವಿಧಾನಸಭೆಯಲ್ಲಿ ಹೇಳಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಗುರುವಾರ ಮಾತನಾಡಿದ ಅವರು, ರಾಜ್ಯ ಸರ್ಕಾರ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರದ ವಿರುದ್ಧ ಆರೋಪ ಮಾಡುತ್ತಿದೆ. ಆದಾಯ ಸಂಗ್ರಹದಲ್ಲಿ ಸರ್ಕಾರ ವಿಫಲವಾಗಿದೆ. ಅತಿ ಹೆಚ್ಚು ಸಾಲ ಮಾಡಿದ ಕೀರ್ತಿ ಕಾಂಗ್ರೆಸ್ ಸರ್ಕಾರದ್ದಾಗಿದೆ ಎಂದು ಟೀಕಿಸಿದರಲ್ಲದೆ, ರಾಜ್ಯ ಮತ್ತು ಜನರನ್ನು ಸಾಲದ ಸುಳಿಗೆ ಕಾಂಗ್ರೆಸ್ ಸಿಲುಕಿಸಿದೆ. ವಿತ್ತೀಯ ಕೊರತೆ ಹೆಚ್ಚಾಗಿ ಜನರ ಮೇಲೆ ಬೆಲೆ ಏರಿಕೆಯ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಲಾಗಿದೆ ಎಂದು ಹೇಳಿದರು.

ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂಬುದನ್ನು ಪದೇ ಪದೇ ಹೇಳಿ, ಜನರ ಗಮನವನ್ನು ಬೇರೆಡೆ ಸೆಳೆದು ತಮ್ಮ ವೈಫಲ್ಯ ಮುಚ್ಚಿಕೊಳ್ಳುವ ಪ್ರಯತ್ನವನ್ನು ನಡೆಸಿದೆ ಎಂದು ಅವರು ದೂರಿದ ಅವರು, ರಾಜ್ಯದಿಂದ ಕೇಂದ್ರಕ್ಕೆ 4.3 ಲಕ್ಷ ಕೋಟಿ ತೆರಿಗೆ ಕೊಡುತ್ತೇವೆ. ಆದರೆ ಕೇಂದ್ರ 100 ರೂ. ನೀಡಿದರೆ 15 ರೂ. ವಾಪಸ್ ಕೊಡುತ್ತಿದೆ



ಎಂದು ಹೇಳಿದ್ದಾರೆ. ಮಹಾರಾಷ್ಟ್ರದ ಬಳಿಕ ಕರ್ನಾಟಕ ಹೆಚ್ಚು ತೆರಿಗೆ ನೀಡುವ ರಾಜ್ಯ. ರಾಜ್ಯದಲ್ಲಿ ಹಲವು ಬಹುರಾಷ್ಟ್ರೀಯ ಕಂಪನಿಗಳಿವೆ. ಈ ಕಂಪನಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಡೆಸುತ್ತವೆ. ಆದರೆ ಅವರ ವ್ಯವಹಾರವೆಲ್ಲಾ ರಾಜ್ಯದಲ್ಲೇ ಇದೆ. ಆದರೆ 100 ಕ್ಕೆ 15 ರೂ. ಮಾತ್ರ ಕೇಂದ್ರ ಸರ್ಕಾರ ಕೊಡುತ್ತಿದೆ ಎಂಬುದು ಸರಿಯಲ್ಲ. ಸರ್ಕಾರ ಅರ್ಧ ಸತ್ಯ ಹೇಳುತ್ತಿದೆ ಎಂದು ವಿಜಯೇಂದ್ರ ಅವರು ಆರೋಪಿಸಿದರು.

2014 ರಲ್ಲಿ ಯುಪಿಎ ಸರ್ಕಾರವಿದ್ದಾಗಲೂ ರಾಜ್ಯಕ್ಕೆ 100 ರೂ.ಗೆ 15 ರೂ. ಬಂದಿರುವುದು. ಮಹಾರಾಷ್ಟ್ರದಲ್ಲಿ ಬಿಜೆಪಿ ಸರ್ಕಾರವಿದ್ದರೂ ಆ ಸರ್ಕಾರಕ್ಕೂ ಕರ್ನಾಟಕಕ್ಕಿಂತ 2 ರೂ. ಕಡಿಮೆ ಬರುತ್ತಿದೆಯೇ ಹೊರತು ಜಾಸ್ತಿಯಲ್ಲ. ಮಲತಾಯಿ ಧೋರಣೆ ಎಲ್ಲಿ ಬಂತು. ಮೋದಿ ಅವರು ಪ್ರದಾನಿ ಆದ ಮೇಲೆ ರಾಜ್ಯಕ್ಕೆ ಹಣ ಬರುತ್ತಿಲ್ಲ ಎನ್ನುವುದು ಸರಿಯಲ್ಲ. ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ. ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಈ ವರ್ಷ 1.4 ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ. 42 ಸಾವಿರ ಕೋಟಿ ರೂ. ಬಡ್ಡಿ ತುಂಬಬೇಕಿದೆ. ಹೀಗಾದರೆ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಸಿಗಲ್ಲ. ಸಾಲ ಮಾಡಿರುವುದು ಈ ಸರ್ಕಾರದ ಸಾಧನೆ ಎಂದು ಹೇಳಿದರು.

# ಮಾ.28ಕ್ಕೆ ಯುವನಿಧಿಗಾಗಿ ವಿದ್ಯಾರ್ಥಿಗಳ ನೊಂದಣಿ ಸಪ್ತಾಹ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗ್ಯಾರಂಟಿ ಯೋಜನೆಯ ಭಾಗವಾಗಿರುವ ಯುವನಿಧಿ ಯೋಜನೆಗೆ ಫಲಾನುಭವಿಗಳನ್ನು ಗುರ್ತಿಸಿ ನೊಂದಾಯಿಸುವ ಸಲುವಾಗಿ ತಾಲ್ಲೂಕು ಗ್ಯಾರೆಂಟಿ ಸಮಿತಿ ವತಿಯಿಂದ ಮಾ.28 ರಂದು ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನೊಂದಣಿ ಸಪ್ತಾಹ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಲ್. ಪಿ.ಪ್ರಕಾಶ್‌ಗೌಡ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ 25ನೇ ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕು ಗ್ಯಾರಂಟಿ ಸಮಿತಿಯೂ ಜಿಲ್ಲೆಯಲ್ಲಿಯೇ ಹೆಚ್ಚು



ಕ್ರಿಯಾಶಿಲವಾಗಿ ಕೆಲಸ ಮಾಡುತ್ತಿದೆ. ರಾಜ್ಯ ಸರ್ಕಾರದ 5ಮಹತ್ವಕಾಂಕ್ಷಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ, ಜಿಲ್ಲೆಗೆ ಮೊದಲ ಸ್ಥಾನ ಪಡೆದಿದ್ದೇವೆ. ಪದವಿ, ಡಿಪ್ಲೋಮೋ ಪಡೆದ ನಿರುದ್ಯೋಗಿ ಯುವಕರಿಗಾಗಿ ನಿರುದ್ಯೋಗ ಭತ್ಯೆ ಪಡೆಯುವ ಯುವನಿಧಿ ಯೋಜನೆಗಾಗಿ ಯುವಕರ ನೊಂದಯಿಸುವ ಕೆಲಸಕ್ಕೆ ಸಮಿತಿ ಮುಂದಾಗಿದ್ದು, ತಾಲ್ಲೂಕಿನ ಎಲ್ಲ ಪದವಿ ಕಾಲೇಜುಗಳಿಗೆ ಭೇಟಿ ಕೊಟ್ಟು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡ ಲಾಗುವುದು, ಇದಕ್ಕಾಗಿ ಮಾ.23 ರಂದು ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಚಾಲನೆ ನೀಡಲಾಗವುದು ಎಂದರು.

ಯುವನಿಧಿಯಡಿ ಈಗಾಗಲೇ 789 ಪದವಿ ಪಡೆದ ನಿರುದ್ಯೋಗಿಗಳು ಮತ್ತು 12 ಮಂದಿ ಡಿಪ್ಲೋಮೊ ಪಡೆದವರಿಗೆ ಸರ್ಕಾರದಿಂದ ಯೋಜನೆ ಲಾಭ ದೊರೆಯುತ್ತಿದ್ದು, ಇದನ್ನು ಮತ್ತಷ್ಟು ಹೆಚ್ಚಿಸುವ ಸಲುವಾಗಿ ಕಾಲೇಜುಗಳಲ್ಲಿ ಜಾಗೃತಿ ಸಪ್ತಾಹ ನಡೆಸಲಾಗುತ್ತಿದೆ. ಇನ್ನುಳಿದಂತೆ ತಾಲ್ಲೂಕಿನಲ್ಲಿ ಗ್ಯಾರಂಟಿ ಯೋಜನೆಗಳು ಅತುತ್ತಮವಾಗಿ ನಡೆಯುತ್ತಿದ್ದು, ಗೃಹಲಕ್ಷ್ಮಿ ಯೋಜನೆಯಡಿ 81,111 ಜನ ನೊಂದಣಿಯಾಗಿದ್ದು, ಇದರಲ್ಲಿ ಪ್ರಸ್ತುತ 79,716 ಮಹಿಳೆಯರಿಗೆ ಯೋಜನೆಯಿಂದ ಪ್ರತಿ ಮಾಸಿಕ 2000 ರೂ.ಹಣ ಬರುತ್ತಿದೆ. ಪ್ರತಿ ತಿಂಗಳಿಗೆ ಗೃಹಲಕ್ಷ್ಮಿ ಯೋಜನೆಗೆ 15.94 ಕೋಟಿ ರೂ. ಹಣ ಬರುತ್ತಿದ್ದು ಶೇ. 98.28 ರಷ್ಟು ಪ್ರಗತಿ ಸಾಧಿಸಲಾಗಿದೆ. ಹಣ ಪಡೆಯುವುತ್ತಿದ್ದರ ಪೈಕಿ 157ಮಂದಿ ಸಾವನ್ನಪ್ಪಿದ್ದು, ಆ ಹಣವನ್ನು ಹೊಸದಾಗಿ ಗುರ್ತಿಸಿ ನೀಡಲಾಗುತ್ತಿದೆ. ಜಿಎಸ್‌ಟಿ ವ್ಯಾಪ್ತಿಯಡಿ ಇದ್ದ 153ಮಂದಿಯನ್ನು ಯೋಜನೆಯಿಂದ ಹೊರಗಿಡಲಾಗಿದೆ ಎಂದು ಮಾಹಿತಿ ನೀಡಿದರು.

ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಗಿರೀಶ್ ಸೇರಿ ಸಭೆಯಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರು, ಮತ್ತು ಅಧಿಕಾರಿಗಳು ಹಾಜರಿದ್ದರು.

## ನೆಸ್ಟಿಂಗ್ ಅನಾವರಣ- ಉಚಿತ ಆರೋಗ್ಯ ತಪಾಸಣೆ | ಸಮಾಜದಲ್ಲಿ ಜಾಗೃತಿ ಮೂಡಬೇಕು

# ಆರೋಗ್ಯದ ಕಡೆ ಪ್ರತಿಯೊಬ್ಬರಿಗೂ ಹೆಚ್ಚಿನ ಕಾಳಜಿ ಅಗತ್ಯ

• ಪ್ರಜೋದಯ ವರದಿ

**ಹಾಸನ:** ಕುಟುಂಬದ ವೈದ್ಯೆಯಂತೆ ಕಾರ್ಯ ನಿರ್ವಹಿಸುವ ಮಹಿಳೆಯರ ಆರೋಗ್ಯದ ಬಗ್ಗೆ ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಬೇಕಾದ ಅಗತ್ಯವಿದೆ ಎಂದು ಸಾಮಾಜಿಕ ಹೋರಾಟಗಾರರು ಹಾಗೂ ಸಾಹಿತಿ ರೂಪ ಹಾಸನ್ ಹೇಳಿದರು.

ನಗರದ ಕೆ.ಆರ್. ಪುರಂನಲ್ಲಿರುವ ಜನಪ್ರಿಯ ಆಸ್ಪತ್ರೆಯಲ್ಲಿ ಬರ್ತ್ ಅಂಡ್ ಬ್ಲೂಮ್ ವಿಭಾಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ಜನಪ್ರಿಯ ''ನೆಸ್ಟಿಂಗ್ ಪ್ಯಾಕೇಜ್'' ಅನಾವರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ ಅವರು, ಮಹಿಳೆ ಎಂದರೆ ಕೇವಲ ಕುಟುಂಬದ ಸದಸ್ಯೆಯಷ್ಟೇ ಅಲ್ಲ, ಅವಳು ಕುಟುಂಬದ ಆರೋಗ್ಯವನ್ನು ಕಾಪಾಡುವ ಕುಟುಂಬದ ವೈದ್ಯೆಯಂತೆ ಕಾರ್ಯ ನಿರ್ವಹಿಸುತ್ತಾಳೆ. ಮನೆಯಲ್ಲಿರುವ ಎಲ್ಲರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು, ಅವರ ಆಹಾರ ಪದ್ಧತಿ, ಬಟ್ಟೆ, ದಿನನಿತ್ಯದ ಅವಶ್ಯಕತೆಗಳು ಎಲ್ಲವನ್ನೂ ಗಮನಿಸಿ ನೋಡಿಕೊಳ್ಳುವ ಜವಾಬ್ದಾರಿಯನ್ನು ಮಹಿಳೆಯೇ ಹೊರುತ್ತಾಳೆ ಎಂದು ಶ್ಲಾಘಿಸಿದರು.

ಈ ನಿಟ್ಟಿನಲ್ಲಿ ಮಹಿಳೆಯರ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡುವುದು ಸಮಾಜದ ಪ್ರತಿಯೊಬ್ಬರ ಕರ್ತವ್ಯವಾಗಬೇಕು. ನಮ್ಮ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡದೆ ಕುಟುಂಬದ ಎಲ್ಲ ಸದಸ್ಯರ ಅಗತ್ಯಗಳನ್ನು ಮೊದಲು ಪೂರೈಸಲು ಮುಂದಾಗುತ್ತಾರೆ. ಬಹುತೇಕ ಮನೆಗಳಲ್ಲಿ ಹಿರಿಯರು ಮತ್ತು ಇತರರು ಊಟ ಮಾಡಿದ ನಂತರವೇ



ಮಹಿಳೆಯರು ಊಟ ಮಾಡುವ ಪರಿಸ್ಥಿತಿ ಇಂದಿಗೂ ಕಾಣಿಸುತ್ತಿದೆ. ಇದರಿಂದಾಗಿ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸುವವರಲ್ಲಿ ಮಹಿಳೆಯರೇ ಮೊದಲಿಗರಾಗಿದ್ದಾರೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಗರ್ಭಿಣಿಯರು, ಬಸರಿ ಹಾಗೂ ಬಾಣಂತಿಯರ ಆರೋಗ್ಯ ಅತ್ಯಂತ ಪ್ರಮುಖವಾದದ್ದು. ಮಹಿಳೆ ಕೇವಲ ವ್ಯಕ್ತಿಯಲ್ಲ, ಅವಳು ಮತ್ತೊಂದು ಜೀವಕ್ಕೆ ಜೀವ ನೀಡುವಂತಹ ಅಪರೂಪದ ಶಕ್ತಿಯನ್ನು ಹೊಂದಿದ್ದಾಳೆ. ಆದ್ದರಿಂದ ಮಹಿಳೆಯರ ಆರೋಗ್ಯದ ಕಡೆ ಕುಟುಂಬದ ಸದಸ್ಯರು ಮತ್ತು ಸಮಾಜ ಎರಡೂ ಹೆಚ್ಚಿನ ಕಾಳಜಿ ವಹಿಸಬೇಕು. ಈ ಹಿನ್ನೆಲೆಯಲ್ಲಿ ಜನಪ್ರಿಯ ಆಸ್ಪತ್ರೆ ಕಡಿಮೆ ವೆಚ್ಚದಲ್ಲಿ ಗರ್ಭಿಣಿ, ಬಸರಿ ಮತ್ತು ಬಾಣಂತಿಯರಿಗಾಗಿ ವಿಶೇಷ ಪ್ಯಾಕೇಜ್ ಪರಿಚಯಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

ಆಸ್ಪತ್ರೆ ಹಾಗೂ ಸಮೂಹ ಶಿಕ್ಷಣ ಸಂಸ್ಥೆಗಳ ಚೇರ್ಮನ್ ಡಾ. ವಿ.ಕೆ. ಅಬ್ದುಲ್ ಬಶೀರ್ ಮಾತನಾಡಿ, ಮನೆಯಲ್ಲಿನ ಮಹಿಳೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಗಂಡಸಿನ ಯಶಸ್ಸಿನ ಹಿಂದೆ ಮಹಿಳೆಯ ಪ್ರೇರಣೆ ಮತ್ತು ಬೆಂಬಲ ಇರುವುದನ್ನು ನಾವು ಅನೇಕ ಸಂದರ್ಭಗಳಲ್ಲಿ ಕಾಣುತ್ತೇವೆ. ನಾನು ಎಂ.ಬಿ.ಬಿ.ಎಸ್. ಪೂರೈಸಿ ಮದುವೆಯಾದ ನಂತರ ನನ್ನ ಮುಂದಿನ ಬೆಳವಣಿಗೆ ಮತ್ತು ಸಾಧನೆಗೆ ನನ್ನ ಪತ್ನಿಯೇ ಪ್ರಮುಖ ಕಾರಣರಾಗಿದ್ದಾರೆ ಎಂದು ಅವರು ಹೇಳಿದರು.

ಗಂಡ-ಹೆಂಡತಿಯ ನಡುವೆ ಕೆಲವೊಮ್ಮೆ ಭಿನ್ನಾಭಿಪ್ರಾಯಗಳು ಉಂಟಾಗುವುದು ಸಹಜ. ಆದರೆ ಪರಸ್ಪರ ಸಮನ್ವಯತೆ, ಸಹನೆ ಮತ್ತು ತಾಳ್ಮೆ ಇದ್ದರೆ ಆ ಕುಟುಂಬದ ಜೀವನ ಸುಖಮಯವಾಗಿರುತ್ತದೆ. ದಾಂಪತ್ಯ ಜೀವನದಲ್ಲಿ ಪರಸ್ಪರ ಅರ್ಥೈಸಿಕೊಳ್ಳುವ ಗುಣ ಮುಖ್ಯ. ನಮ್ಮ ಮನೆಯ ಅಭಿವೃದ್ಧಿಯಷ್ಟೇ ಅಲ್ಲ, ದೇಶದ ಸಮಗ್ರ ಅಭಿವೃದ್ಧಿಯಲ್ಲಿಯೂ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಎಲ್ಲೆಲ್ಲಿ ಮಹಿಳೆಯರು ಅಧಿಕಾರಿಗಳಾಗಿ ಅಥವಾ ಆಡಳಿತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಾರೋ ಅಲ್ಲಿ ಉತ್ತಮ ಆಡಳಿತ ಮತ್ತು ಶಿಸ್ತು ಕಾಣಿಸಿಕೊಳ್ಳುತ್ತದೆ. ಮಹಿಳೆಯರು ಸಮಾಜದ ಪ್ರಗತಿಯ ಪ್ರಮುಖ ಶಕ್ತಿಯಾಗಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಜನಪ್ರಿಯ ಆಸ್ಪತ್ರೆ ವೈಸ್ ಚೇರ್ಮೆನ್ ಫಾತೀಮ ನಸ್ರೀನ್ ಬಶೀರ್, ವ್ಯವಸ್ಥಾಪಕ ನಿರ್ದೇಶಕ ಡಾ.ಶಾರೂಖ್ ಅಬ್ದುಲ್, ಸಾಮಾಜಿಕ ಹೋರಾಟರಾರರಾದ ಕೆ.ಟಿ.ಜಯಶ್ರೀ, ಭಾನುಮತಿ, ಪತ್ರಕರ್ತರಾದ ಭವ್ಯ ನಾಗರಾಜು, ಶ್ವೇತಾ ಮಂಜು, ಶೋಭಾ ಮಹೇಶ್, ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ. ಸಂಜನಾ, ಮಕ್ಕಳ ತಜ್ಞರಾದ ಡಾ. ಪವಿತ್ರ, ಶಸ್ತ್ರಚಿಕಿತ್ಸಾ ತಜ್ಞ ಡಾ.ಪ್ರವೀಣ್, ಜನರಲ್ ಫಿಜಿಷಿಯನ್ ಡಾ. ಮನೋಜ್ ಕುಮಾರ್, ಆಸ್ಪತ್ರೆ ಆಡಳಿತ ಅಧಿಕಾರಿ ಮೊಹಮ್ಮದ್ ಕಿಸಾರ್, ಸಿಬ್ಬಂದಿಗಳು ಇನ್ನಿತರರು ಉಪಸ್ಥಿತರಿದ್ದರು.

# ವಚನ ಕಲ್ಯಾಣ ನಾಟಕ ಸಿದ್ಧಪಡಿಸಲು ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ವಚನ ಕಲ್ಯಾಣ ಎಂಬ ಅಹೋರಾತ್ರಿ (9 ಗಂಟೆ) ನಾಟಕವನ್ನು ಸಿದ್ಧಪಡಿಸಿ, ನಾಡಿನಾದ್ಯಂತ ಪ್ರದರ್ಶನ ಮಾಡಲು ಇಲಾಖೆ ಉದ್ದೇಶಿಸಿದ್ದು, ನುರಿತ ಹಾಗೂ ಆಸಕ್ತ ಯುವಕ / ಯುವತಿಯರು ಹಾಗೂ ಅನುಭವಿ ರಂಗಕಲಾವಿದರು / ಗಾಯಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಯೋಮಿತಿ 18 ರಿಂದ 40 ವರ್ಷಗಳು, ರಂಗ ಶಿಕ್ಷಣದಲ್ಲಿ ತರಬೇತಿ ಪಡೆದ ಹಾಗೂ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ ಆದ್ಯತೆಯನ್ನು ನೀಡಲಾಗುವುದು, ತುಂಬಿದ ಅರ್ಜಿಗಳನ್ನು ಮಾರ್ಚ್ 20 ರೊಳಗೆ ಸದಸ್ಯ ಕಾರ್ಯದರ್ಶಿ ಸಂತ ಕವಿ ಕನಕದಾಸ ಮತ್ತು ತತ್ವ ಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು - 560056 ಇಲ್ಲಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪುವಂತೆ ಅಥವಾ ಇ-ಮೇಲ್ kanakaresearchcentre@gmail.com ದ ಮೂಲಕ ಸಲ್ಲಿಸಬಹುದು.

ಆಯ್ಕೆಯಾದ ಅಭ್ಯರ್ಥಿಗಳು ಮೂರು ತಿಂಗಳ ಕಾಲದ ಅವಧಿಯಲ್ಲಿ ಪೂರ್ಣಕಾಲಿಕವಾಗಿ ತರಬೇತಿ-ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯ, ಮಾಸಿಕ ಗೌರವಧನ ಮತ್ತು ಊಟ - ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. ಅರ್ಜಿಯ ನಮೂನೆಯನ್ನು ಕನ್ನಡ ಸಂಸ್ಕೃತಿ ಇಲಾಖೆಯ ವೆಬ್‌ಸೈಟ್ kannadasiri.karnataka.gov.in ನಲ್ಲಿ ಪಡೆಯಬಹುದು.

ಹೆಚ್ಚಿನ ಮಾಹಿತಿ ವಿವರಗಳಿಗಾಗಿ ಕಚೇರಿ ಸಮಯದಲ್ಲಿ ಸಿ.ಬಸವಲಿಂಗಯ್ಯ (ವಚನ ಕಲ್ಯಾಣ ನಾಟಕದ ನಿರ್ದೇಶಕರು) ಇವರಲ್ಲಿ ಮಾಹಿತಿ ಪಡೆಯಬಹುದು ಮೊಬೈಲ್ ಸಂಪರ್ಕ ಸಂಖ್ಯೆ: 9448538620. ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

